ಸಂಪಾದಕರು :
ಎಂ.ಎಸ್. ವಿಕಾಸ್

ಬುಧವಾರ, ಅಕ್ಟೋಬರ್ 25, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 163 RNI : 27369/75


# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ಭದ್ರಾ ಬಲದಂಡೆ ನಾಲೆಗೆ ನೀರು ಬಿಡುಗಡೆ



ಶಿವಮೊಗ್ಗ, ಅ.24- ಭದ್ರಾ ಜಲಾಶಯದಿಂದ ಬಲದಂಡೆ ನಾಲೆಗೆ ಮಂಗಳವಾರ ರಾತ್ರಿ 10 ಗಂಟೆಯಿಂದ ನೀರು ಬಿಡಲಾಗಿದೆ.

ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದ ಕಾರಣ ಜಲಾಶಯವು ಈ ಬಾರಿ ಭರ್ತಿಯಾಗಿಲ್ಲ. ಆದ್ದರಿಂದ ಬೇಸಿಗೆ ಸಮಯದಲ್ಲಿ ಕುಡಿಯುವ ನೀರನ್ನು ಉಳಿಸಬೇಕಾಗಿರುವುದರಿಂದ ಅಚ್ಚುಕಟ್ಟಿನ ಮುಂಗಾರಿನ ಬೆಳೆಗೆ ಘೋಷಣೆ ಮಾಡಿದ್ದ 100 ದಿನಗಳಲ್ಲಿ ಆಫ್ ಅಂಡ್ ಆನ್ ಪದ್ಧತಿ ಜಾರಿ ಮಾಡಲಾಯಿತು. ಆ ಪ್ರಕಾರ ಈ ಹಿಂದೆ 10 ದಿನ ನಾಲೆಯಲ್ಲಿ ನೀರು ಬಂದ್ ಮಾಡಲಾಗಿತ್ತು. ಈಗ ಮತ್ತೆ 7 ದಿನ ನೀರು ಬಂದ್ ಮಾಡಿ, ಮಂಗಳವಾರ ರಾತ್ರಿಯಿಂದ ನೀರು ಹರಿಸಲಾಗುತ್ತಿದೆ.

ಮೂಲಗಳ ಪ್ರಕಾರ ನವೆಂಬರ್ 16 ರವರೆಗೆ ಬಲದಂಡೆ ನಾಲೆಯಲ್ಲಿ ನೀರು ಹರಿಯಲಿದೆ ಎಂದು ಹೇಳಲಾಗುತ್ತಿದೆ.
ಆದರೆ, ನ.16ಕ್ಕೆ ನೀರು ನಿಲುಗಡೆ ಮಾಡಿದರೆ, ಭತ್ತದ ಬೆಳೆಗೆ ತೊಂದರೆ ಆಗಲಿದೆ. ಹಾಗಾಗಿ ನ.30 ರವರೆಗೆ ನಾಲೆ ನೀರು ಹರಿಸಬೇಕೆಂಬುದು ಅಚ್ಚುಕಟ್ಟಿನ ಕೊನೆ ಭಾಗದ ರೈತರ ಒತ್ತಾಯವಾಗಿದೆ.

# ಲಕ್ಷಾಂತರ ಜನರ ಕಣ್ಮನ ಸೆಳೆದ ದಸರಾ ಜಂಬೂ ಸವಾರಿ



ಮೈಸೂರು, ಅ. 24 - ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಜಂಬೂ ಸವಾರಿಯನ್ನು ಮಂಗಳವಾರ ಲಕ್ಷಾಂತರ ಜನರು ಕಣ್ತುಂಬಿಕೊಂಡರು.

ದಸರಾ ಮಹೋತ್ಸವದ ಅಂತಿಮ ಕ್ಷಣಕ್ಕೆ ಕಾಯುತ್ತಿದ್ದ ಅಸಂಖ್ಯಾತ ಭಕ್ತರು ಅಭಿಮನ್ಯು ಮೇಲಿನ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿ ಕುಳಿತಿದ್ದ ನಾಡದೇವತೆ ಶ್ರೀ ಚಾಮುಂಡೇಶ್ವರಿಯನ್ನು ಭಕ್ತಿ-ಭಾವದಿಂದ ನಮಿಸುವ ಮೂಲಕ ಪುನೀತರಾದರು.

ಸಂಜೆ 4.40 ರಿಂದ 5 ಗಂಟೆಯ ಶುಭ ಮೀನ ಲಗ್ನದಲ್ಲಿ ದಸರಾ ಜಂಬೂ ಸವಾರಿ ಮೆರವಣಿಗೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಿದರು. ಅರಮನೆ ಅಂಗಳದಲ್ಲಿ ಅಂಬಾರಿಗೆ ಸಿಎಂ ಸಿದ್ದರಾಮಯ್ಯ ಪುಷ್ಪಾರ್ಚನೆ ಮಾಡಿದರು. ಈ ವೇಳೆ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಡಿಸಿಎಂ ಡಿ. ಕೆ.ಶಿವಕುಮಾರ್ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಮೇಯರ್ ಶಿವಕುಮಾರ್ ಅಂಬಾರಿಗೆ ಪುಷ್ಪಾರ್ಚನೆ ಮಾಡಿ ಸಿಎಂಗೆ ಸಾಥ್ ನೀಡಿದರು.

ದಸರಾ ವಸ್ತುಪ್ರದರ್ಶನದ ಆವರಣದಲ್ಲಿ 21 ಕುಶಾಲತೋಪುಗಳನ್ನು ಸಿಡಿಸಿ, ರಾಷ್ಟ್ರಗೀತೆ ನುಡಿಸಲಾಯಿತು. ನಂತರ ಅಂಬಾರಿ ಆನೆಯು ಪೊಲೀಸ್ ಅಶ್ವದಳದ ಬೆಂಗಾವಲಿನಲ್ಲಿ ಸಾಗಿತು. ಸಿಬ್ಬಂದಿಯು ರಾಜಪೋಷಾಕು ಧರಿಸಿ, ವಿವಿಧ ಲಾಂಛನಗಳನ್ನು ಹಿಡಿದು ಅಂಬಾರಿಯ ಸುತ್ತ ಮೆರವಣಿಗೆಯಲ್ಲಿ ಸಾಗಿ ರಾಜರ ಕಾಲದ ಗತವೈಭವವನ್ನು ನೆನಪಿಸಿದರು.

ದಸರಾ ಜಂಬೂ ಸವಾರಿಗೆ ಸ್ತಬ್ಧಚಿತ್ರ ಹಾಗೂ ವಿವಿಧ ಕಲಾತಂಡಗಳು ಮೆರುಗು ನೀಡಿದವು. ರಾಜ್ಯದ ವಿವಿಧ ಜಿಲ್ಲೆಗಳ 31 ಹಾಗೂ ವಿವಿಧ ಇಲಾಖೆಗಳ 18 ಸೇರಿದಂತೆ ಒಟ್ಟು 49 ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಇಸ್ರೋ ಯಶಸ್ವೀ ಚಂದ್ರಯಾನ-3 ಯೋಜನೆಗೆ ಸಂಬಂಧಿಸಿದ ಸ್ತಬ್ಧಚಿತ್ರ ಗಮನ ಸೆಳೆಯಿತು.

ಈ ಬಾರಿಯ ದಸರಾ ಮಹೋತ್ಸವದಲ್ಲಿ ಮೈಸೂರು ನಗರ ಪಾಲಿಕೆ ಮೇಯರ್ ಶಿವಕುಮಾರ್ ಅವರಿಗೆ ಮತ್ತೆ ಕುದುರೆ ಸವಾರಿ ಭಾಗ್ಯ ಲಭಿಸಿತು. ಶಿವಕುಮಾರ್ ಅವರ ಮೇಯರ್ ಅವಧಿ ಅಂತ್ಯಗೊಂಡಿದ್ದರೂ ಹೊಸದಾಗಿ ಯಾರೂ ಮೇಯರ್ ಆಗಿ ಅಧಿಕಾರ ಸ್ವೀಕರಿಸದೇ ಇರುವುದರಿಂದ ಶಿವಕುಮಾರ್ ಅವರೇ ಈ ಬಾರಿಯೂ ಜಂಬೂ ಸವಾರಿ ಮೆರವಣಿಗೆಯಲ್ಲಿ ಕುದುರೆ ಸವಾರಿ ಮಾಡಿದರು.

### ನಾಲ್ಕನೇ ಬಾರಿಗೆ ಗಾಂಭೀರ್ಯದಿಂದ ಹೆಜ್ಜೆ ಹಾಕಿದ 'ಅಭಿಮನ್ಯು'



'ಅಭಿಮನ್ಯು' ಆನೆಗೆ 750 ಕೆ.ಜಿ. ತೂಕದ ಚಿನ್ನದ ಅಂಬಾರಿ ಹೊತ್ತ ಅನುಭವವಾಗಿದೆ. 'ಅರ್ಜುನ' ಆನೆಯ ಉತ್ತರಾಧಿಕಾರಿಯಾಗಿ ಅಂಬಾರಿ ಹೊರುವ ಜವಾಬ್ದಾರಿ ನಿಭಾಯಿಸುತ್ತಿರುವ ಅಭಿಮನ್ಯು ಎರಡು ಬಾರಿ ಕರೊನಾದಿಂದ ಅರಮನೆ ಆವರಣದಲ್ಲಿಯೇ ಯಶಸ್ವಿಯಾಗಿ ಅಂಬಾರಿ ಹೊತ್ತು ಸೈ ಎನಿಸಿಕೊಂಡಿದ್ದ. ಕಳೆದ ವರ್ಷ ಮೂರನೇ ಬಾರಿ ಅದ್ಧೂರಿ ದಸರಾದಲ್ಲಿ ಬನ್ನಿ ಮಂಟಪದವರೆಗೆ ಪ್ರಥಮ ಬಾರಿಗೆ ಭಾರೀ ತೂಕದ ಅಂಬಾರಿ ಹೊತ್ತು ಎಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದ. ಈ ವರ್ಷ ನಾಲ್ಕನೇ ಬಾರಿಯಾಗಿದ್ದು, ತನ್ನ ಜವಾಬ್ದಾರಿಯನ್ನು ಅಭಿಮನ್ಯು ಯಶಸ್ವಿಯಾಗಿ ಪೂರೈಸಿದ್ದಾನೆ.

# ನವೀಕರಣ ಇಂಧನದ ಆಕರ್ಷಣೆ ಹೆಚ್ಚಿಸಿದ ಇಸ್ರೇಲ್-ಗಾಜಾ ಯುದ್ಧ

ಫ್ರಾಂಕ್‌ಫರ್ಟ್, ಅ. 24 – ಗಾಜಾ ಯುದ್ಧದ ಕಾರಣದಿಂದಾಗಿ ಜಗತ್ತು ಮುಂದಿನ ದಿನಗಳಲ್ಲಿ ಪಳೆಯುಳಿಕೆ ಇಂಧನವಾದ ತೈಲ ಹಾಗೂ ಅನಿಲ ಕೈ ಬಿಟ್ಟು ನವೀಕರಿಸಬಹುದಾದ ಇಂಧನದ ಕಡೆ ಇನ್ನಷ್ಟು ಹೆಚ್ಚಿನ ಒಲವು ತೋರಬಹುದಾಗಿದೆ.

ಈ ಹಿಂದೆ 1970ರ ವೇಳೆ ಇಂಧನ ಬೆಲೆ ತೀವ್ರ ಏರಿಕೆಯಾಗಿ ವಿಶ್ವದೆಲ್ಲೆಡೆ ಸಂಕಷ್ಟ ಎದುರಾಗಿತ್ತು. ಈಗ ಮತ್ತೆ ಅದೇ ಪರಿಸ್ಥಿತಿ ಎದುರಾಗುವ ಕಳವಳ ಇದೆ.

ಮಧ್ಯಪ್ರಾಚ್ಯದಲ್ಲಿ ಮತ್ತೆ ಸಂಕಷ್ಟ ಎದುರಾಗಿದೆ. ಇದರಿಂದಾಗಿ ತೈಲ ಮಾರುಕಟ್ಟೆಯಲ್ಲಿ ಮತ್ತೆ ಆಘಾತ ಉಂಟಾಗಿದೆ ಎಂದು ಅಂತರರಾಷ್ಟ್ರೀಯ ಇಂಧನ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕ ಫತೀಹ್ ಬಿರೊಲ್ ಹೇಳಿದ್ದಾರೆ.

ರಷ್ಯಾ - ಉಕ್ರೇನ್ ಸಮರದ ಕಾರಣದಿಂದಾಗಿ ಈಗಾಗಲೇ ಇಂಧನ ಮಾರುಕಟ್ಟೆ ಮೇಲೆ ಒತ್ತಡ ಬಿದ್ದಿದೆ. ಈಗ ಗಾಜಾ ಸಮಸ್ಯೆಯೂ ಸೇರಿಕೊಂಡಿದೆ. ಈ ಹಿನ್ನೆಲೆಯಲ್ಲಿ ತೈಲ ಹಾಗೂ ಅನಿಲಗಳು ಸುರಕ್ಷಿತ ಇಂಧನ ಎಂದು ಯಾರೂ ಹೇಳಲಾಗದು ಎಂದು ಬಿರೊಲ್ ತಿಳಿಸಿದ್ದಾರೆ.

ಇದು ವಿಶ್ವದೆಲ್ಲೆಡೆ ಇಂಧನ ರೂಪಾಂತರಣಕ್ಕೆ ಕಾರಣವಾಗಬಹುದು. ಜನರು ಗಾಳಿ ಇಲ್ಲವೇ ಸೌರ ವಿದ್ಯುತ್ ಕಡೆ ಹೆಚ್ಚಿನ ಒಲವು ತೋರಬಹುದು. ಇವುಗಳು ದೀರ್ಘಾವಧಿಗೆ ಪರಿಹಾರ ನೀಡುತ್ತವೆ. ಇಂಧನ ಸುರಕ್ಷತೆಯ ಜೊತೆಗೆ ಪರಿಸರ ಬದಲಾವಣೆ ತಡೆಗೆ ನೆರವಾಗುತ್ತವೆ ಎಂದವರು ಹೇಳಿದ್ದಾರೆ.

ಇಸ್ರೇಲ್ - ಹಮಾಸ್ ಸಂಘರ್ಷ ಆರಂಭವಾದ ನಂತರ ಇದುವರೆಗೂ ತೈಲದ ಮೇಲಿನ ಒತ್ತಡ ಮಧ್ಯಮ ಪ್ರಮಾಣದಲ್ಲಿದೆ. ಸಂಘರ್ಷ ಆರಂಭಕ್ಕೆ ಮುಂಚೆ ತೈಲ ಬೆಲೆ ಬ್ಯಾರಲ್‌ಗೆ 84 ಡಾಲರ್ ಆಗಿತ್ತು. ಈಗ 90 ಡಾಲರ್‌ಗಳಿಗೆ ತಲುಪಿದೆ. ಸಂಘರ್ಷದ ಕಾರಣದಿಂದ ಇದುವರೆಗೂ ತೈಲ ಪೂರೈಕೆಯ ಮೇಲೆ ಯಾವುದೇ ಪರಿಣಾಮವಾಗಿಲ್ಲ.

2022ರಲ್ಲಿ ಪಳೆಯುಳಿಕೆ ಇಂಧನ ಬೆಲೆ ತೀವ್ರ ಏರಿಕೆಯಾಗಿತ್ತು. ನಂತರ ತೈಲ ಬೆಲೆ ತುಸು ಕಡಿಮೆಯಾಗಿದ್ದರೂ ಸಹ ಮಾರುಕಟ್ಟೆಯಲ್ಲಿ ಏರಿಳಿತ ಮುಂದುವರೆದಿದೆ.

50 ವರ್ಷಗಳ ಹಿಂದೆ 1973ರಲ್ಲಿ ಯೊಮ್ ಕಿಪ್ಪುರ್ ಸಮರದ ವೇಳೆ ತೈಲ ಬೆಲೆ ತೀವ್ರ ಏರಿಕೆ ಕಂಡಿತ್ತು. ಆ ಸಂದರ್ಭದಲ್ಲಿ ತೈಲ ಬೆಲೆ ಮೂರು ಪಟ್ಟು ಹೆಚ್ಚಾಗಿತ್ತು. ತೈಲ ಪೂರೈಕೆ ನಿಯಂತ್ರಣಕ್ಕಾಗಿ ಆ ಸಂದರ್ಭದಲ್ಲಿ ಐ.ಇ.ಎ. ಸ್ಥಾಪಿಸಲಾಗಿತ್ತು.

1978ರಲ್ಲಿ ಇರಾನ್ ಕ್ರಾಂತಿಯ ಕಾರಣದಿಂದಾಗಿ ಮತ್ತೆ ಬೆಲೆ ಏರಿಕೆಯಾಗಿತ್ತು. ಅಣು ಘಟಕಗಳ ಸ್ಥಾಪನೆ ಮೂಲಕ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನ ನಡೆಸಲಾಗಿತ್ತು.

ಈ ಬಾರಿ ನಮ್ಮ ಬಳಿ ಸಾಕಷ್ಟು ತಂತ್ರಜ್ಞಾನ ಇದೆ. ಸೌರ, ಗಾಳಿ, ಅಣು ವಿದ್ಯುತ್ ಆಯ್ಕೆ ಇದೆ. ಎಲೆಕ್ಟ್ರಿಕ್ ಕಾರುಗಳಿವೆ. ಇವುಗಳ ಬಳಕೆ ವಿಶ್ವದಾದ್ಯಂತ ಹೆಚ್ಚಾಗಲಿದೆ. ಇದು ಇಂಧನ ರೂಪಾಂತರಣಕ್ಕೆ ಮತ್ತಷ್ಟು ಉತ್ತೇಜನ ನೀಡಲಿದೆ ಎಂದವರು ಹೇಳಿದ್ದಾರೆ.

2020ರಲ್ಲಿ ವಿಶ್ವದಲ್ಲಿ ಶೇ.4ರಷ್ಟು ಮಾತ್ರ ಎಲೆಕ್ಟ್ರಿಕ್ ಕಾರುಗಳಿದ್ದವು. ಈಗ ಅವುಗಳ ಸಂಖ್ಯೆ ಶೇ.20ಕ್ಕೆ ಹೆಚ್ಚಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ಪಳೆಯುಳಿಕೆ ಇಂಧನ ಆಧರಿತ ವಿದ್ಯುತ್ ಉತ್ಪಾದನೆಯ ಪ್ರಮಾಣ ಶೇ.70ರಿಂದ ಶೇ.60ಕ್ಕೆ ಇಳಿದಿದೆ. ಇದು 2030ರ ವೇಳೆಗೆ ಶೇ.40ಕ್ಕೆ ಇಳಿಯಲಿದೆ ಬಿರೊಲ್ ತಿಳಿಸಿದ್ದಾರೆ.

## ಯಡಿಯೂರಪ್ಪ ಸಮರ್ಥ ನಾಯಕ, ಅವರ ನೇತೃತ್ವದಲ್ಲೇ ಚುನಾವಣೆ ಸೂಕ್ತ



ದಾವಣಗೆರೆ, ಅ. 24 - ರಾಜ್ಯ ಬಿಜೆಪಿಯಲ್ಲಿ ಕೆಲವರು ಸರ್ವಾಧಿಕಾರಿ ಧೋರಣೆ ನಡೆಸುತ್ತಿದ್ದಾರೆ. ಈ ಧೋರಣೆ ಕೊನೆಯಾಗಬೇಕು ಎಂದು ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಹೇಳಿದ್ದಾರೆ.

ಇಂದಿಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪರೋಕ್ಷವಾಗಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ವಿರುದ್ಧ ಹರಿಹಾಯ್ದರು.

ನಾವು ಏನಾದರೂ ಮಾತನಾಡಿದರೆ ಪಕ್ಷ ವಿರೋಧಿ ಹೇಳಿಕೆ. ಅವರು ಮಾತನಾಡಿದರೆ ಪಕ್ಷ ಸಂಘಟನೆ. ಎಂಎಲ್‌ಸಿ, ರಾಜ್ಯಸಭೆ ಸದಸ್ಯತ್ವ ಅವರು ಹೇಳಿದವರಿಗೆ ಮಾತ್ರ. ಅವರ ಒಳಹೊಡೆತದ ಬಗ್ಗೆ ಹೇಳುವಂತೆಯೇ ಇಲ್ಲ ಎಂದು ಹೇಳಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಪಕ್ಷದ ರಾಜ್ಯ ಅಧ್ಯಕ್ಷರನ್ನಾಗಿ ಮಾಡುವ ಚಿಂತನೆ ನಡೆಯುತ್ತಿರುವ ಬಗ್ಗೆ ಕೇಳಲಾದ ಪ್ರಶ್ನೆ ಗೆ ಉತ್ತರಿಸಿದ ಅವರು, ಹೈಕಮಾಂಡ್ ಏನು (2ನೇ ಪುಟಕ್ಕೆ)

## ಇಡೀ ಆಫ್ರಿಕಾ ಮೀರಿಸಲಿರುವ ಭಾರತದ ಎ.ಸಿ. ವಿದ್ಯುತ್ ಬಳಕೆ



ನವದೆಹಲಿ, ಅ. 24 – 2050ರ ವೇಳೆಗೆ ಭಾರತದ ಮನೆಗಳಿಗೆ ಎ.ಸಿ. ನಿರ್ವಹಿಸಲು ಬೇಕಾಗುವ ವಿದ್ಯುತ್ ಪ್ರಮಾಣ ಪ್ರಸಕ್ತ ಇಡೀ ಆಫ್ರಿಕಾಗೆ ಬಳಕೆಯಾಗುತ್ತಿರುವ ವಿದ್ಯುತ್‌ಗಿಂತ ಹೆಚ್ಚಾಗಿರಬಹುದು ಎಂದು ಅಂತರರಾಷ್ಟ್ರೀಯ ಇಂಧನ ಸಂಸ್ಥೆ (ಐ.ಎ.ಇ.) ವರದಿ ತಿಳಿಸಿದೆ.

ಜಾಗತಿಕ ಇಂಧನ ಕುರಿತ ವರದಿಯೊಂದನ್ನು ಬಿಡುಗಡೆ ಮಾಡಿರುವ ಐ.ಎ.ಇ., ಮುಂದಿನ ಮೂರು ದಶಕಗಳಲ್ಲಿ ಭಾರತದಲ್ಲಿ ವಿದ್ಯುತ್ ಬೇಡಿಕೆಯ ಬೆಳವಣಿಗೆ ಬೇರೆ ಯಾವುದೇ ದೇಶ ಇಲ್ಲವೇ ವಲಯಕ್ಕಿಂತ ಹೆಚ್ಚಾಗಿರಲಿದೆ ಎಂದು ಅಂದಾಜಿಸಿದೆ.

2022ರಲ್ಲಿ ಭಾರತದ ಇಂಧನ ಬಳಕೆ 42 ಎಕ್ಸಾಜೋಲ್ಸ್ (ಇ.ಜೆ.) ಆಗಿತ್ತು. ಇದು 2030ರ ವೇಳೆಗೆ 53.7 ಇ.ಜೆ. ಆಗಲಿದೆ ಹಾಗೂ 2050ರ ವೇಳೆಗೆ 73 ಇ.ಜೆ.ಗೆ ತಲುಪಲಿದೆ ಎಂದು ಅಂದಾಜಿಸಲಾಗಿದೆ.

ಕಳೆದ ಐದು ದಶಕಗಳಲ್ಲಿ ಭಾರತ 700 ಬಿಸಿ ಗಾಳಿಯ ಘಟನೆಗಳನ್ನು ಕಂಡಿದೆ. ಇದರಿಂದ 17 ಸಾವಿರ ಜನ ಸಾವನ್ನಪ್ಪಿದ್ದಾರೆ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಭಾರತದಲ್ಲಿ ಎ.ಸಿ.ಗಳ ಬೇಡಿಕೆ ಗಣನೀಯವಾಗಿ ಹೆಚ್ಚಾಗಲಿದೆ. 2010ರ ನಂತರ ಭಾರತದಲ್ಲಿ ಎ.ಸಿ.ಗಳ ಬೇಡಿಕೆ ಮೂರು ಪಟ್ಟು ಹೆಚ್ಚಾಗಿದೆ. ಸಹಜವಾಗಿಯೇ ವಿದ್ಯುತ್ ಬೇಡಿಕೆಯೂ (2ನೇ ಪುಟಕ್ಕೆ)

# ಅಂತರರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಗೆ ಚಾಲನೆ






ದಾವಣಗೆರೆ, ಅ. 24 – ನಗರದ ಹೈಸ್ಕೂಲ್ ಮೈದಾನದಲ್ಲಿರುವ ಟೆನ್ನಿಸ್ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿರುವ ಅಂತರರಾಷ್ಟ್ರೀಯ ಮಟ್ಟದ ಪುರುಷರ ಟೆನ್ನಿಸ್ ಪಂದ್ಯಾವಳಿಗೆ ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಮತ್ತಿತರೆ ಗಣ್ಯರು ಬಲೂನುಗಳನ್ನು ತೇಲಿ ಬಿಡುವ ಮೂಲಕ ಚಾಲನೆ ನೀಡಿದರು.

ರಾಜ್ಯ ಲಾನ್ ಟೆನ್ನಿಸ್ ಅಸೋಸಿಯೇಷನ್ ಹಾಗೂ ಜಿಲ್ಲಾ ಟೆನ್ನಿಸ್ ಅಸೋಸಿಯೇಷನ್‌ಗಳ ಸಂಯುಕ್ತಾಶ್ರಯದಲ್ಲಿ ಪಂದ್ಯಾವಳಿ ಆಯೋಜಿಸಲಾಗಿದೆ.

ಉದ್ಘಾಟನೆ ನೆರವೇರಿಸಿ ಮಾತನಾಡಿದ ವೆಂಕಟೇಶ್, ದಾವಣಗೆರೆ ನಗರದಲ್ಲಿ ಮೂರನೇ ಬಾರಿಗೆ ಅಂತರರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿ ಆಯೋಜಿಸುತ್ತಿರುವುದು ಹೆಮ್ಮೆಯ ವಿಷಯ. ಇಲ್ಲಿ ಪಂದ್ಯಾವಳಿ ಆಯೋಜಿಸಿರುವುದು ಯುವಕರಿಗೆ ಸ್ಫೂರ್ತಿಯಾಗಲಿದೆ ಎಂದರು.

ಟೆನ್ನಿಸ್ ಪಂದ್ಯವು ಆಕರ್ಷಕ ಹಾಗೂ ಸ್ಫೂರ್ತಿ ತುಂಬುವ ಕ್ರೀಡೆಯಾಗಿದೆ. ಇಲ್ಲಿ ನಡೆಯುತ್ತಿರುವ ಪಂದ್ಯಾವಳಿಯಲ್ಲಿ ದೇಶದ ವಿವಿಧ ಭಾಗಗಳು ಹಾಗೂ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳು ಪಾಲ್ಗೊಂಡಿದ್ದಾರೆ ಎಂದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ನಿವೃತ್ತ ಏರ್ ಮಾರ್ಷಲ್ ಹೆಚ್.ಬಿ. ರಾಜಾರಾಮ್, ಕ್ರೀಡಾಪಟುಗಳು ಸ್ಪರ್ಧೆಯಲ್ಲಿ ಸಂಪೂರ್ಣವಾಗಿ ತೊಡಗಿಕೊಳ್ಳಬೇಕು. ಅತ್ಯುತ್ತಮ ಪ್ರದರ್ಶನ ನೀಡುವ ಉತ್ಸಾಹ ಇದ್ದಾಗ, ಇಂದಲ್ಲದಿದ್ದರೂ ಮುಂದಾದರೂ ಅದರ ಫಲ ಸಿಗುತ್ತದೆ ಎಂದು ಹೇಳಿದರು.

ವೇದಿಕೆ ಮೇಲೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಉಪ ವಿಭಾಗಾಧಿಕಾರಿ ದುರ್ಗಾಶ್ರೀ, ಪಾಲಿಕೆ ಆಯುಕ್ತೆ ರೇಣುಕಾ, ಉದ್ಯಮಿ ಸಮರ್ಥ್ ಶಾಮನೂರು, ಜಿಲ್ಲಾ ಒಕ್ಕೂಟದ (2ನೇ ಪುಟಕ್ಕೆ)

## ಸೌರ ವಿದ್ಯುತ್‌ಗೆ 380 ಶತಕೋಟಿ ಡಾಲರ್ ಹೂಡಿಕೆ

ನವದೆಹಲಿ, ಅ. 24 – ಈ ವರ್ಷ ಸೌರ ವಿದ್ಯುತ್ ವಲಯದಲ್ಲಿ 380 ಶತಕೋಟಿ ಡಾಲರ್ ಹೂಡಿಕೆಯಾಗಲಿದೆ ಎಂದು ಅಂತರರಾಷ್ಟ್ರೀಯ ಸೌರ ಶಕ್ತಿ ಒಕ್ಕೂಟವಾದ ಐ.ಎಸ್.ಎ. ತಿಳಿಸಿದೆ.



ಕಳೆದ ವರ್ಷ ಸೌರ ಶಕ್ತಿ ವಲಯದಲ್ಲಿ 310 ಶತಕೋಟಿ ಡಾಲರ್ ಹೂಡಿಕೆಯಾಗಿತ್ತು. ಈ ವರ್ಷ ಪ್ರಥಮಾರ್ಧದಲ್ಲಿ 234 ಶತಕೋಟಿ ಡಾಲರ್ ಹೂಡಿಕೆಯಾಗಿದೆ. ಸೌರಶಕ್ತಿ ವಲಯ ಹೂಡಿಕೆಯನ್ನು ಸೆಳೆಯುತ್ತಿದೆ ಎಂದು ಒಕ್ಕೂಟ ಹೇಳಿದೆ. ಈ ವರ್ಷ ಒಟ್ಟಾರೆ ಸೌರ ಶಕ್ತಿ ವಲಯದ ಹೂಡಿಕೆ 380 ಶತಕೋಟಿ ಡಾಲರ್‌ಗಳಿಗೆ ತಲುಪಲಿದೆ. ಇದು ಸಂತಸದ ವಿಷಯವಾಗಿದೆ ಎಂದು ಐ.ಎಸ್.ಎ. ಪ್ರಧಾನ ನಿರ್ದೇಶಕ ಅಜಯ್ ಮಾಥುರ್ ಹೇಳಿದ್ದಾರೆ.

ಪ್ರಸಕ್ತ ಐ.ಎಸ್.ಎ. 116 (2ನೇ ಪುಟಕ್ಕೆ)

# ಪುಣ್ಯ ಕಾರ್ಯಗಳೇ ನಮಗೆ ರಕ್ಷಾಕವಚ : ನಾಲ್ವಡಿ ಶಾಂತಲಿಂಗ ಶ್ರೀ



ವಿಜಯದಶಮಿ ಅಂಗವಾಗಿ ದಾವಣಗೆರೆ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಅಂಬುಛೇದನ ಮಾಡಿದರು.

ದಾವಣಗೆರೆ, ಅ.24- ನಾವು ಮಾಡಿದ ಪುಣ್ಯ ಕಾರ್ಯಗಳೇ ನಮಗೆ ರಕ್ಷಾಕವಚ ಎಂದು ಜಗಳೂರು ಕಣ್ವಕುಪ್ಪೆ ತಪೋಕ್ಷೇತ್ರದ ಶ್ರೀ ಡಾ.ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ವಿಶ್ವ ಹಿಂದೂ ಪರಿಷದ್, ಸಾರ್ವಜನಿಕ ವಿಜಯದಶಮಿ ಮಹೋತ್ಸವ ಸಮಿತಿ ಆಶ್ರಯದಲ್ಲಿ ಮಂಗಳವಾರ ಸಂಜೆ ನಗರದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಬನ್ನಿ ಮುಡಿಯುವ ಹಾಗೂ ಅಂಬುಛೇದನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಭಗವಂತ ಇದ್ದಾನೋ ಇಲ್ಲವೋ ಎಂಬ ಜಿಜ್ಞಾಸೆ ಇಂದಿನ ಪೀಳಿಗೆಯಲ್ಲಿ ಕಾಡುತ್ತಿದೆ. ಭಗವಂತನ ನಮಗೆ ಏನೂ ಮಾಡಿಲ್ಲ ಎಂದು ಧರ್ಮಾಂತರಗೊಂಡ ಉದಾಹರಣೆಗಳೂ ಇವೆ. ಆದರೆ ಈ ಪಂಚತತ್ವಗಳು, ಪಂಚ ಕರ್ಮೇಂದ್ರಿಯಗಳು, ಪಂಚೇಂದ್ರಿಯಗಳು, ತನ್ಮಾತೃತೆಗಳು ಭಗವಂತನ ಕೊಡುಗೆ ಎಂಬುದನ್ನು ಅರಿಯಬೇಕು ಎಂದರು.

ಸೂರ್ಯ-ಚಂದ್ರರ ಪ್ರಕಾಶತೆಯನ್ನು ಜೀವನದುದ್ದಕ್ಕೂ ನಾವು ಬಳಸಿಕೊಳ್ಳುತ್ತೇವೆ. ಬದುಕಲು ಅಗತ್ಯವಾಗಿ ಬೇಕಾದ ಗಾಳಿ ಹಾಗೂ ನೀರನ್ನು ಬಳಕೆ ಮಾಡುತ್ತೇವೆ. ಇವೆಲ್ಲವೂ ಭಗವಂತನ ಕೊಡುಗೆಯೇ. ಇದನ್ನು ಅರ್ಥೈಸಿಕೊಂಡು ನಡೆದಾಗ ಬದುಕು ಸಾರ್ಥಕವಾಗುತ್ತದೆ.

ಧಾರ್ಮಿಕ ಭಾವನೆ, ವಿದ್ಯೆ, ಧರ್ಮ ಗುರುಗಳ ಬಗ್ಗೆ ಶ್ರದ್ಧೆ, ಹೆತ್ತವರ ಬಗ್ಗೆ ಗೌರವ, ನಮ್ಮ ಸಂಸ್ಕೃತಿ, ಪರಂಪರೆಯ ಬಗ್ಗೆ ಗೌರವ ಇಟ್ಟುಕೊಂಡು ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂದು ಶ್ರೀಗಳು ಕರೆ ನೀಡಿದರು.

ಭಾರತ ವಿಶ್ವ ಗುರುವಾಗಿ ಮೆರೆದ ದೇಶ. ಅದಕ್ಕೆ ಕಾರಣ ಇಲ್ಲಿನ ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯ, ಪರಂಪರೆ ಹಾಗೂ ಅಧ್ಯಾತ್ಮ. ಇಂತಹ ಪರಂಪರೆಯನ್ನು ಅನುಗ್ರಹಿಸಿದ್ದು, ಇಲ್ಲಿನ ಶರಣರು, ಸಂತರು. ಅವರನ್ನು ಪಡೆದ ನಾವೇ ಭಾಗ್ಯಶಾಲಿಗಳು ಎಂದು ಸ್ವಾಮೀಜಿ ಹೇಳಿದರು.

ಪಂಚ ಕರ್ಮೇಂದ್ರಿಯಗಳು ಹಾಗೂ ಪಂಚ ಜ್ಞಾನೇಂದ್ರಿಯಗಳು ಸೇರಿ ಹತ್ತು ಇಂದ್ರಿಯಗಳನ್ನು ಜಾಗೃತಗೊಳಿಸುವ ಅರ್ಥವೇ ದಶಮಿ ಆಚರಣೆ. ನಮ್ಮ ಇಂದ್ರಿಯಗಳನ್ನು ವ್ರತ, ಆಚರಣೆ, ಯೋಗ, ಧ್ಯಾನದ ಮೂಲಕ ಸರಿಪಡಿಸಿಕೊಳ್ಳಬೇಕು ಎಂಬುದನ್ನು ನಮ್ಮ ಪೂರ್ವಜರು ಹೇಳಿದ್ದಾರೆ ಎಂದರು.

ಹಿಂದೂ ಜಾಗರಣ ವೇದಿಕೆಯ (2ನೇ ಪುಟಕ್ಕೆ)

## ಶಾಮನೂರಿನ ಕೊಂಡಜ್ಜಿ ಕಮಲಮ್ಮ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ ದಿ|| ಕೊಂಡಜ್ಜಿ ಶಿವಪ್ಪನವರ ಧರ್ಮಪತ್ನಿ **ಶ್ರೀಮತಿ ಕಮಲಮ್ಮ** ಅವರು ದಿನಾಂಕ 24-10-2023ರ ಮಂಗಳವಾರ ರಾತ್ರಿ 8 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 25-10-2023ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ಮೊ. : 99727 99907, 98458 47579

# ಸಿದ್ದು ಸಂಪುಟದಲ್ಲಿ ಸತೀಶ್ ಜಾರಕಿಹೊಳಿಗೆ ಹಿಂಸೆ



ಬೆಂಗಳೂರು, ಅ.24- ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹಿಂಸೆ ಅನುಭವಿಸುತ್ತಿದ್ದಾರೆಂದು ಅವರ ಸಹೋದರ ಹಾಗೂ ಶಾಸಕ ರಮೇಶ್ ಜಾರಕಿಹೊಳಿ ಹೇಳಿದ್ದಾರೆ.

ಸಿದ್ದರಾಮಯ್ಯ ಸಂಪುಟದಲ್ಲೇ ಸತೀಶ್ ಅವರಿಗೆ ಈ ಪರಿಸ್ಥಿತಿ ಬಂದರೆ, ಬೇರೆಯವರ ಆಡಳಿತದಲ್ಲಿ ಇನ್ನಾವ ಸ್ಥಿತಿ ಬರಬಹುದು ಎಂದಿದ್ದಾರೆ.

ಖಾಸಗಿ ಕಾರ್ಯಕ್ರಮವೊಂದರ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, ಸಿದ್ದರಾಮಯ್ಯ ಮೊದಲ ಬಾರಿಗೆ ಮುಖ್ಯ ಮಂತ್ರಿ ಆಗಿದ್ದ ಸಂದರ್ಭದಲ್ಲಿ ಆಡಳಿತದಲ್ಲಿ ದರ್ಪ ಹಾಗೂ ದಕ್ಷತೆ ಇತ್ತು, ಆದರೆ ಈ ಬಾರಿ ಆ ಎರಡೂ ಕಾಣುತ್ತಿಲ್ಲ ಎಂದರು.

ಮುಖ್ಯಮಂತ್ರಿ ಅವರಿಗೆ ಯಾಕೆ ಇಂತಹ ಸ್ಥಿತಿ ಬಂದಿದೆಯೋ ಗೊತ್ತಿಲ್ಲ, ನನಗೆ ಅವರ ಬಗ್ಗೆ ಗೌರವವಿದೆ.

ನಾನು ಅವರ ಮೊದಲ ಆಡಳಿತದಲ್ಲಿ ಮಂತ್ರಿಯಾಗಿ ಕೆಲಸ ಮಾಡಿದ್ದೆ, ಅದರ ಅನುಭವದ ಆಧಾರದ ಮೇಲೆ ಈ ಮಾತನ್ನು ಹೇಳುತ್ತಿದ್ದೇನೆ ಎಂದು ಹೇಳಿದ್ದಾರೆ.

ಪ್ರಸ್ತುತ ಮುಖ್ಯಮಂತ್ರಿ ಅವರಿಗೆ ಮುಕ್ತ ಅವಕಾಶ ಇದ್ದಂತಿಲ್ಲ, ಅವರು ಒತ್ತಡದಲ್ಲಿ ಆಡಳಿತ ನಡೆಸುತ್ತಿದ್ದಾರೆ, ಜೊತೆಗೆ ಕೆಲವರು ಅವರನ್ನು ಕಟ್ಟಿಹಾಕಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೆಸರು ಹೇಳದೆಯೇ ಟೀಕಿಸಿದರು.

ಜೆಡಿಎಸ್-ಕಾಂಗ್ರೆಸ್ ಆಡಳಿತದಲ್ಲಿ ಮಂತ್ರಿ ಸ್ಥಾನ ಬಿಟ್ಟು ಬಂಡಾಯ ಏತಕ್ಕೆ ಎದ್ದೆ ಎಂಬ ವಿಷಯ ಈಗ ಸತೀಶ್ ಅವರಿಗೆ ಮನವರಿಕೆ ಆಗಿರಬೇಕು. ಅಂದು ನನಗೆ ಯಾವ ರೀತಿ ಕೆಲವರು ಹಿಂಸೆ ಕೊಟ್ಟರೋ, ಅದೇ ಸ್ಥಿತಿ ಸತೀಶ್ ಅವರಿಗೂ ಸಿದ್ದರಾಮಯ್ಯ ಸಂಪುಟದಲ್ಲಿ ಎದುರಾಗಿದೆ ಎಂದೂ ಹೇಳಿದರು.

ಮೈತ್ರಿ ಸರ್ಕಾರ ಉರುಳಿಸಿ, ಬಿಜೆಪಿ ಜೊತೆ ಕೈಜೋಡಿಸಿದ್ದು ಕೆಲವರಿಗೆ ಅಸಮಾಧಾನವಿತ್ತು, ನಾನು ಅಂದು ಆ ಕೆಲಸ ಮಾಡದಿದ್ದರೆ, ನನ್ನನ್ನು ರಾಜಕೀಯವಾಗಿ ಮುಗಿಸುತ್ತಿದ್ದರು ಎಂದು ಆರೋಪಿಸಿದರು.

ಇದೀಗ ಸತೀಶ್‌ಗೂ ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಮುಂದೆ ಏನಾಗುತ್ತದೋ ಯಾರೂ ತಿಳಿಯರು ಎಂದೂ ಹೇಳಿದರು.

ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ನಾಯಕ ಜಗದೀಶ್ ಶೆಟ್ಟರ್ ಅವರನ್ನು ಪದೇ ಪದೇ ಭೇಟಿ ಮಾಡುವುದರಲ್ಲಿ ಯಾವುದೇ ರಾಜಕೀಯವಿಲ್ಲ ಎಂದು ರಮೇಶ್ ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿದರು.

ಅವರು ಹಿರಿಯರು ಅನುಭವಿಕರು, ಮಿಗಿಲಾಗಿ ಒಳ್ಳೆಯವರು. ಈ ಕಾರಣಕ್ಕೆ ಅವರನ್ನು ನಾನು ಪದೇ ಪದೇ ಭೇಟಿ ಮಾಡುತ್ತೇನೆ ಅಷ್ಟೆ ಎಂದರು.

ಬೆಳಗಾವಿ ಜಿಲ್ಲಾ ರಾಜಕೀಯ ಮತ್ತು ಬೆಂಗಳೂರು ಅಭಿವೃದ್ಧಿ ವಿಚಾರದಲ್ಲಿ ಸತೀಶ್ ಮುನಿಸಿಕೊಂಡಿದ್ದಾರೆ ಎಂಬ ಮಾತುಗಳು ಕೇಳಿ ಬಂದಿದ್ದವು. ಕೆಲವು ಶಾಸಕರ ಜೊತೆಗೂಡಿ ಪ್ರವಾಸ ಮಾಡಲು ಮುಂದಾಗಿದ್ದರು, ವರಿಷ್ಠರ ಮಧ್ಯೆ ಪ್ರವೇಶದಿಂದ ಅದು ಸ್ಥಗಿತಗೊಂಡಿತು. ಇದರ ಬೆನ್ನಲ್ಲೇ ರಮೇಶ್ ನೀಡಿರುವ ಹೇಳಿಕೆ ಆಸಕ್ತಿ ಪಡೆದುಕೊಂಡಿದೆ.

# ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರನ್ನು ಸದಾ ಸ್ಮರಿಸಬೇಕು

## ಹರಪನಹಳ್ಳಿ : ಕಿತ್ತೂರು ರಾಣಿ ಚನ್ನಮ್ಮ ಜಯಂತ್ಯೋತ್ಸವದಲ್ಲಿ ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್



ಹರಪನಹಳ್ಳಿ, ಅ.24- ಇತಿಹಾಸವನ್ನು ಯಾರು ಅರಿತು ಕೊಳ್ಳುವುದಿಲ್ಲವೋ, ಅವರು ಏನೂ ಮಾಡಲು ಸಾಧ್ಯವಿಲ್ಲ. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರು ಸದಾ ಸ್ಮರಣೆಯಲ್ಲಿರಬೇಕು ಎಂದು ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್ ಹೇಳಿದರು.

ಪಟ್ಟಣದ ಸಾಮರ್ಥ್ಯ ಸೌಧದಲ್ಲಿ ಸೋಮವಾರ ತಾಲ್ಲೂಕು ಆಡಳಿತದಿಂದ ಆಯೋಜಿಸಿದ್ದ ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಂದು ಹೋರಾಟದ ಕಿಚ್ಚಿನಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕಿತ್ತೂರು ರಾಣಿ ಚನ್ನಮ್ಮನ ತ್ಯಾಗ, ಧೈರ್ಯ, ಸಾಹಸ ಸ್ಮರಣೆ ಅಗತ್ಯ. ಹಾಗಾಗಿ ಪ್ರತಿಯೊಬ್ಬರೂ ಭಾರತದ ಸಂಸ್ಕೃತಿ, ಚರಿತ್ರೆಯನ್ನು ಉಳಿಸಿಕೊಳ್ಳುವುದು ಇತಿಹಾಸ ಮಹತ್ವವಾಗಿದೆ. ಇತಿಹಾಸವನ್ನು ಅರಿಯಬೇಕು, ಕಲಿಯಬೇಕು ಎಂದು ಅವರು ಕರೆ ನೀಡಿದರು.

ವೀರಶೈವ ಪಂಚಾಮಸಾಲಿ ಸಮುದಾಯದ ತಾಲ್ಲೂಕು ಅಧ್ಯಕ್ಷ ಪಾಟೀಲ್ ಬೆಟ್ಟನಗೌಡ ಮಾತನಾಡಿ, ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಪ್ರಥಮ ಮಹಿಳೆ ಕಿತ್ತೂರು ರಾಣಿ ಚನ್ನಮ್ಮ ಆಗಿದ್ದಾರೆ. ಒಗ್ಗಟ್ಟಿನಿಂದ ರಾಜ್ಯವನ್ನು ಉಳಿಸಿಕೊಳ್ಳಲು ನಿರಂತರ ಹೋರಾಟದಲ್ಲಿ ಭಾಗಿಯಾದ ಕಿತ್ತೂರು ರಾಣಿ ಚನ್ನಮ್ಮನ ಪಾತ್ರ ಬಹುಮುಖ್ಯವಾಗಿದೆ. ದೇಶಕ್ಕಾಗಿ ತ್ಯಾಗ ಮಾಡಿದ ಅನೇಕ ಮಹನೀಯರನ್ನು ಒಂದು ಜಾತಿಗೆ ಸೀಮಿತಗೊಳಿಸಬಾರದು. ಸರ್ವ ಜನಾಂಗದವರ ಅಭಿವೃದ್ಧಿಗಾಗಿ ಎಲ್ಲರೂ ಹೋರಾಟ ಮಾಡಿದವರಾಗಿದ್ದು, ಅಂತವರನ್ನು ಸ್ಮರಣೆ ಮಾಡಿದಾಗ ಮಾತ್ರ ಜಯಂತಿಗೆ ಅರ್ಥ ಬರುತ್ತದೆ ಎಂದ ಅವರು, ಅವರ ನಡೆ, ನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದರು.

ಸಿಆರ್‌ಪಿ ಅಣ್ಣಪ್ಪ ಹಾರಕನಾಳು ಕಿತ್ತೂರು ರಾಣಿ ಚನ್ನಮ್ಮನವರ ಕುರಿತು ವಿಶೇಷ ಉಪನ್ಯಾಸದಲ್ಲಿ ರಾಣಿ ಚನ್ನಮ್ಮನವರು ಸಾಹಸ, ಧೈರ್ಯವನ್ನು ಸಣ್ಣ ವಯಸ್ಸಿನಲ್ಲಿಯೇ ಅಳವಡಿಸಿಕೊಂಡು, ರಾಜ್ಯ ಸುರಕ್ಷಿತವಾಗಿರಬೇಕು ಎಂದರೆ ನೆಮ್ಮದಿಯಿಂದ ಜೀವನ ಮಾಡಬೇಕು. ಅವರ ಜತೆಗೆ ಸಂಗೊಳ್ಳಿ ರಾಯಣ್ಣ, ಬಾಳಪ್ಪನವರೂ ಸಹ ಸಹಕರಿಸಿ, ಕಿತ್ತೂರು ಉಳಿಸಿಕೊಳ್ಳಲು ಹಾಗೂ ದೇಶವನ್ನು ಉಳಿಸಿಕೊಳ್ಳಲು ಹೋರಾಟ ಮಾಡಿದವರ ಧೈರ್ಯ, ಸಾಹಸವನ್ನು ನಮ್ಮ ಜೀವನದಲ್ಲಿ ಬಂದಾಗ ತೋರಿಸಬೇಕು. ಇವರ ವಿಚಾರಧಾರೆಗಳನ್ನು ನಮ್ಮ ಮುಂದಿನ ಪೀಳಿಗೆಯ ಮಕ್ಕಳಿಗೆ ತಿಳಿಸಬೇಕು ಎಂದರು.

ಸಮುದಾಯದ ಹಿರಿಯ ಮುಖಂಡ ವೀರಣ್ಣ ಕುಂಚೂರು ಹಾಗೂ ಪೂಜಾರ ಬಸವರಾಜ ಮತ್ತು ಮುಖಂಡರು ಶೀಘ್ರವೇ ಪಟ್ಟಣದಲ್ಲಿನ ಪ್ರಮುಖ ವೃತ್ತಕ್ಕೆ ವೀರರಾಣಿ ಕಿತ್ತೂರು ಚನ್ನಮ್ಮನವರ ಹೆಸರನ್ನು ನಾಮಕರಣ ಮಾಡಬೇಕು ಎಂದು ಎಸಿಯವರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಗಿರೀಶ್‌ಬಾಬು, ಗ್ರೇಡ್ 2 ತಹಶೀಲ್ದಾರ್ ನಟರಾಜ್, ತಾಲ್ಲೂಕು ಪಂಚಮಸಾಲಿ ಮುಖಂಡರಾದ ಆರುಂಡಿ ನಾಗರಾಜ್, ಎ.ಜಿ.ಮಂಜುನಾಥ್, ಕುಸುಮಾ ಜಗದೀಶ, ಚನ್ನನಗೌಡ, ಓಂಕಾರಗೌಡ, ಎಸ್. ಸುರೇಶ್, ಉಮಾ, ಶ್ರೀಮತಿ ಕೊಟ್ರೇಶ್ ಬಾಗಳಿ ಕೊಟ್ರೇಶಪ್ಪ, ಪುಷ್ಪಾ ದಿವಾಕರ್, ಈರಣ್ಣ, ಬಸವರಾಜ, ಕಂದಾಯ ಅಧಿಕಾರಿಗಳಾದ ವಸಂತ ಪಾಟೀಲ್, ರಾಘವೇಂದ್ರ, ಶಶಿಕುಮಾರ್, ಸುರೇಶ ಬೆಂಡಿಗೇರಿ, ಎನ್.ಮಂಜುನಾಥ್, ಪಂಪಣ್ಣ ಇತರರು ಇದ್ದರು.

# ಜಿಗಳಿ ಕ್ಯಾಂಪ್ ಚೌಡೇಶ್ವರಿ ದೇವಸ್ಥಾನದಲ್ಲಿ ದಶಮಿ



ಮಲೇಬೆನ್ನೂರು, ಅ.24- ವಿನಾಯಕ ನಗರ (ಜಿಗಳಿ ಕ್ಯಾಂಪ್) ಕ್ಯಾಂಪ್‌ನಲ್ಲಿರುವ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ವಿಜಯದಶಮಿ ಅಂಗವಾಗಿ ಮಂಗಳವಾರ ವಿಶೇಷ ಪೂಜೆ, ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು. ತದೇವಸ್ಥಾನ ಕಮಿಟಿಯ ಎಂ.ಹುಲುಗೇಶ್, ಎನ್.ಪ್ರಸಾದ್ ರಾವ್, ಕಟ್ಟಾ ನಾಗೇಶ್, ಎನ್.ಸತ್ಯನಾರಾಯಣ, ರಾಟಿ ಸತ್ಯೆಪ್ಪ, ಎನ್. ವೆಂಕಟನಾರಾಯಣ, ಹಲಗೇರಿ ಹನುಮಂತಪ್ಪ, ಕುಂಬಾರ ಬಸವರಾಜ್, ಕುಂಬಾರ ವೀರ ಭದ್ರಪ್ಪ, ಮೇಕಾ ನಾಗೇಶ್ವ ರಾವ್, ಡ್ರೈವರ್ ಹನುಮಂತಪ್ಪ, ಸಿ.ಹೆಚ್.ಪ್ರಸಾದ್, ಅಂಗಡಿ ಮೈಲಾರಪ್ಪ, ಭಾಸ್ಕರ್, ಗ್ರಾ.ಪಂ. ಸದಸ್ಯ ಶ್ರೀನಿವಾಸ್, ಸಿ.ಹೆಚ್.ಹರೀಶ್, ಮಕ್ಕಳ ತಜ್ಞ ಡಾ. ಶ್ರೀನಿವಾಸ್, ಜಿಗಳಿಯ ಜಿ.ಆನಂದಪ್ಪ, ಬಿ.ಎಂ.ದೇವೇಂದ್ರಪ್ಪ, ನಾಗಸನಹಳ್ಳಿ ಮಹೇ ಶ್ವರಪ್ಪ, ಪತ್ರಕರ್ತ ಪ್ರಕಾಶ್, ಕುಂಬಳೂರು ವಾಸು ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಮಲೇಬೆನ್ನೂರಿನಲ್ಲಿ ಸಂಭ್ರಮದ ವಿಜಯದಶಮಿ



ಮಲೇಬೆನ್ನೂರು, ಅ.24- ಪಟ್ಟಣದ ಗ್ರಾಮದೇವತೆ ಶ್ರೀ ಏಕನಾಥೇಶ್ವರಿ ದೇವಸ್ಥಾನದ ಆವಣದಲ್ಲಿರುವ ಬನ್ನಿಕಟ್ಟೆಯಲ್ಲಿ ಮಂಗಳವಾರ ಸಂಜೆ ಅಂಬುಛೇದನ ಮಾಡುವ ಮೂಲಕ ಗ್ರಾಮಸ್ಥರು ಸಾಮೂಹಿಕವಾಗಿ ಬನ್ನಿ ಮುಡಿದು ನಾಡಹಬ್ಬ ವಿಜಯದಶಮಿಯನ್ನು ಸಂಭ್ರಮದಿಂದ ಆಚರಿಸಿದರು.

ಬನ್ನಿ ಮರಕ್ಕೆ ಪೂಜೆ ಸಲ್ಲಿಸಿದ ನಂತರ ರೈತರು ಜೋಳದ ದಂಟನ್ನು ಸಮರ್ಪಿಸಿದರು. ನಂತರ ಶ್ರೀ ಬಸವೇಶ್ವರ, ಶ್ರೀ ಬೀರಲಿಂಗೇಶ್ವರ, ಶ್ರೀ ಜೋಡಿ ಆಂಜನೇಯ, ಶ್ರೀ ದುರ್ಗಾಂಬಿಕೆ ಸೇರಿದಂತೆ ಪಟ್ಟಣದ ಎಲ್ಲಾ ದೇವರುಗಳ ಮೆರವಣಿಗೆ ರಾಜ ಬೀದಿಗಳಲ್ಲಿ ಜರುಗಿತು.

ವಿಜಯದಶಮಿ ಅಂಗವಾಗಿ ಏಕನಾಥೇಶ್ವರಿ ದೇವಸ್ಥಾನದ ಆವರಣದಲ್ಲಿ ಶ್ರೀ ಬೀರಲಿಂಗೇಶ್ವರ ಕಾರಣಿಕ ನಡೆಯಿತು. 'ಬಂಗಾರದ ಕಳಸಕ್ಕೆ ಮುತ್ತಿನ ಹಾರ



ಹಾಕಿತಲೇ ಅದಕ್ಕೆ ನಾ ಅದನಿ' ಎಂದು ಪೂಜಾರಪ್ಪ ಕಾರಣಿಕ ನುಡಿದರು.

ಇದೇ ವೇಳೆ ಶ್ರೀ ಬೀರಲಿಂಗೇಶ್ವರ

### ಗಮನ ಸೆಳೆದ ಬೀರಲಿಂಗೇಶ್ವರ ಕಾರಣಿಕ

ದೇವರ ಮರಿ ಬನ್ನಿ ಮಹೋತ್ಸವವು ಎಲ್ಲಾ ದೇವರುಗಳ ಸಮ್ಮುಖದಲ್ಲಿ ಬೀರಪ್ಪನ ಹೊರಗುಡಿ ಹತ್ತಿರ ಜರುಗಿತು.

ನಂತರ ಎಲ್ಲಾ ದೇವರುಗಳು ಬೀರ ಲಿಂಗೇಶ್ವರ ದೇವಸ್ಥಾನಕ್ಕೆ ಆಗಮಿಸಿದ್ದು, ದೊಡ್ಡ ಎಡೆ ಜಾತ್ರೆ ಮುಗಿಸಿಕೊಂಡು ತಮ್ಮ ತಮ್ಮ ದೇವಸ್ಥಾನಗಳಿಗೆ ತೆರಳಲಿವೆ.

**ದೊಡ್ಡ ಎಡೆ ಜಾತ್ರೆ :** ವಿಜಯದಶಮಿ ಪ್ರಯುಕ್ತ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ದೊಡ್ಡ ಎಡೆ ಜಾತ್ರೆಯು ಇದೇ ದಿನಾಂಕ 29ರ ಭಾನುವಾರ ನಡೆಯಲಿದೆ. ದಿನಾಂಕ 28ರ ಶನಿವಾರ ಸಂಜೆ 7 ರಿಂದ 9 ಗಂಟೆವರೆಗೆ ಶ್ರೀ ಕಾಳಿಕಾ ಹೋಮವನ್ನು ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಕಾರ್ಯದರ್ಶಿ ಕೆ.ಪಿ.ಗಂಗಾಧರ್ ತಿಳಿಸಿದ್ದಾರೆ.

# ಕನಕಪುರವನ್ನು ಬೆಂಗಳೂರಿಗೆ ಸೇರಿಸುವುದಕ್ಕೆ ಕುಮಾರ ಆಕ್ಷೇಪ



ರಾಮನಗರ, ಅ. 24 - ಕನಕಪುರವು ಬೆಂಗಳೂರು ವ್ಯಾಪ್ತಿಗೆ ಸೇರಲಿದೆ ಎಂಬ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೇಳಿಕೆಗೆ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ. ಕುಮಾರಸ್ವಾಮಿ ಆಕ್ಷೇಪಿಸಿದ್ದಾರೆ.

ಇದು ರಾಮನಗರ ಜಿಲ್ಲೆ ಜನರಿಗೆ ಮಾಡುವ ದ್ರೋಹ ಮತ್ತು ಕನಕಪುರ ಜನರಿಗೆ ಮಂಕುಬೂದಿ ಎರಚುವ ಹುನ್ನಾರ. ಕನಕಪುರ ಸುತ್ತಮುತ್ತ ಯಾರ ಆಸ್ತಿಗಳಿವೆ? ಅದರಲ್ಲಿ ಬೇನಾಮಿಗಳೆಷ್ಟು? ಎಲ್ಲೆಲ್ಲಿ ಅಕ್ರಮವಾಗಿ ಬೇಲಿ ಹಾಕಲಾಗಿದೆ? ಈ ಅಕ್ರಮಗಳನ್ನು ಸಕ್ರಮ ಮಾಡಿಕೊಳ್ಳಲು ಬೆಂಗಳೂರು ಸೇರ್ಪಡೆ ನಾಟಕವೇ? ಎಂದು ಪ್ರಶ್ನಿಸಿದ್ದಾರೆ.

ಕನಕಪುರ ಸುತ್ತಮುತ್ತಲಿನ ತಮ್ಮ ಆಸ್ತಿಗಳ ಮೌಲ್ಯವನ್ನು ಹೆಚ್ಚಿಸಿಕೊಂಡು, ಖಜಾನೆ ವೃದ್ಧಿಸಿಕೊಳ್ಳುವ ದುರುದ್ದೇಶವನ್ನು ಶಿವಕುಮಾರ್ ಹೊಂದಿದ್ದಾರೆ. ಅದೇ ಕಾರಣಕ್ಕೆ ಕನಕಪುರ ಜನರ ನೆಪ ಹೇಳಿಕೊಂಡು ಹೊಸ ನಾಟಕ ಶುರು ಮಾಡಿದ್ದಾರೆ ಎಂದವರು ಆರೋಪಿಸಿದ್ದಾರೆ.

ಬೆಂಗಳೂರು ಕನಕಪುರದಿಂದ 52 ಕಿ.ಮೀ. ದೂರದಲ್ಲಿದೆ. ರಾಮನಗರ 25 ಕಿ.ಮೀ. ದೂರದಲ್ಲಿದೆ. ಜನರಿಗೆ ಯಾವುದು ಅನುಕೂಲ? ದಿನ ಬೆಳಗಾದರೆ ಕನಕಪುರದವರು ಬೆಂಗಳೂರಿಗೆ ಅಲೆಯಬೇಕೆ? ಡಿಸಿಎಂ ಅವರ ಒಳ ಉದ್ದೇಶದ ಬಗ್ಗೆ ಅನೇಕ ಅನುಮಾನಗಳು ಸಹಜವಾಗಿಯೇ ಮೂಡುತ್ತವೆ ಎಂದೂ ಅವರು ಹೇಳಿದ್ದಾರೆ.

# ಹರಪನಹಳ್ಳಿ : ಒಳತಾಂಡಾದಲ್ಲಿ ಇಂದು ವಿನಯ್ ಗ್ರಾಮ ವಾಸ್ತವ್ಯ



ಹರಪನಹಳ್ಳಿ ತಾಲ್ಲೂಕಿನ ಒಳತಾಂಡಾದಲ್ಲಿ ಇಂದು ಸಂಜೆ 7 ಗಂಟೆಗೆ ಗ್ರಾಮ ವಾಸ್ತವ್ಯಕ್ಕೆ ದಾವಣಗೆರೆ ಲೋಕಸಭಾ ಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಜಿ.ಬಿ. ವಿನಯ್ ಕುಮಾರ್ ತೆರಳಲಿದ್ದಾರೆ.

ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಿದ್ದು, ಗ್ರಾಮದ ಸ್ಥಳೀಯ ಮೂಲಭೂತ ಸಮಸ್ಯೆ ಬಗ್ಗೆ ಗ್ರಾಮದ ಜನರೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ.

# ಇಡೀ ಆಫ್ರಿಕಾ ಮೀರಿಸಲಿರುವ ಭಾರತದ ಎ.ಸಿ. ವಿದ್ಯುತ್ ಬಳಕೆ

**(1ನೇ ಪುಟದಿಂದ)** ಏರಿಕೆಯಾಗ ಲಿದೆ ಎಂದು ವರದಿ ಹೇಳಿದೆ.

ತಂಪುಗೊಳಿಸುವ ಉದ್ದೇಶಕ್ಕೆ ವಿದ್ಯುತ್ ಬಳಸುವ ಪ್ರಮಾಣ ಕಳೆದ ಮೂರು ವರ್ಷಗಳಲ್ಲಿ ಶೇ.21ರಷ್ಟು ಹೆಚ್ಚಾಗಿದೆ. ತಂಪುಗೊಳಿಸುವ ಉದ್ದೇಶಕ್ಕಾಗಿಯೇ ಒಟ್ಟು ವಿದ್ಯುತ್‌ನ ಶೇ.10ರಷ್ಟು ಬಳಕೆಯಾಗುತ್ತಿದೆ ಎಂದು ವರದಿ ತಿಳಿಸಿದೆ.

2050ರ ವೇಳೆಗೆ ಎ.ಸಿ. ಬೇಡಿಕೆ ಒಂಭತ್ತು ಪಟ್ಟು ಹೆಚ್ಚಾಗಲಿದೆ. ಇದು ಇತರೆಲ್ಲ ಗೃಹ ಬಳಕೆ ಉಪಕರಣಗಳಿಗಿಂತ ವೇಗವಾಗಿ ಬೆಳೆಯುತ್ತಿದೆ ಎಂದು ವರದಿ ತಿಳಿಸಿದೆ. 2050ರ ವೇಳೆಗೆ ಭಾರತದ ಮನೆಗಳ ಎ.ಸಿ.ಗೆ ಬಳಕೆಯಾಗುವ ವಿದ್ಯುತ್, ಪ್ರಸಕ್ತ ಆಫ್ರಿಕಾದ ಇಡೀ ಖಂಡದ ವಿದ್ಯುತ್ ಬಳಕೆಗಿಂತ ಹೆಚ್ಚಾಗಿರಲಿದೆ ಎಂದು ಇ.ಇ.ಎ. ತಿಳಿಸಿದೆ.

# ಮಹರ್ಷಿ ವಾಲ್ಮೀಕಿ ಪ್ರತಿಮೆ ಸ್ಥಾಪಿಸದಿದ್ದರೆ ಧರಣಿ

ದಾವಣಗೆರೆ, ಅ. 24 – ಮಹರ್ಷಿ ವಾಲ್ಮೀಕಿ ಜಯಂತಿಯ ಒಳಗೆ ಚನ್ನಗಿರಿಯಲ್ಲಿ ಮಹರ್ಷಿ ವಾಲ್ಮೀಕಿ ಪ್ರತಿಮೆಯನ್ನು ಸ್ಥಾಪನೆ ಮಾಡದೇ ಇದ್ದರೆ ಜಿಲ್ಲಾಡಳಿತ ಆಯೋಜಿಸಲಾಗಿರುವ ಜಯಂತಿ ಕಾರ್ಯಕ್ರಮಕ್ಕೆ ಬಹಿಷ್ಕಾರ ಹಾಕಲಾಗುವುದು ಎಂದು ಜಿಲ್ಲಾ ವಾಲ್ಮೀಕಿ ನಾಯಕ ಯುವ ಘಟಕ ಎಚ್ಚರಿಕೆ ನೀಡಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ವಾಲ್ಮೀಕಿ ನಾಯಕ ಯುವ ಘಟಕದ ಅಧ್ಯಕ್ಷ ಮಂಜುನಾಥ್ ಚಿಕ್ಕಿ, ಜಿಲ್ಲಾಡಳಿತ ಪ್ರತಿಮೆ ಸ್ಥಾಪಿಸಲು ಇನ್ನೂ ಕಾಲಾವಕಾಶ ಇದೆ. ತ್ವರಿತವಾಗಿ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ವಾಲ್ಮೀಕಿ ಜಯಂತಿ ಅಂಗವಾಗಿ ನಾಡಿದ್ದು ದಿನಾಂಕ 26ರ ಗುರುವಾರ ನಗರದಲ್ಲಿ ಬೈಕ್ ರ್‍ಯಾಲಿಯನ್ನು ಆಯೋಜಿಸಲಾಗಿದೆ. ಬೆಳಿಗ್ಗೆ 10.30ಕ್ಕೆ ಬೈಕ್ ರ್‍ಯಾಲಿಗೆ ನಗರದ ಹೊಂಡದ ಸರ್ಕಲ್‌ನಲ್ಲಿ ವಾಲ್ಮೀಕಿ ಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದ ಸ್ವಾಮೀಜಿ ಚಾಲನೆ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಸಮಾಜದ ಮುಖಂಡರು ಉಪಸ್ಥಿತರಿರಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮೇಯರ್ ವಿನಾಯಕ ಪೈಲ್ವಾನ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ಸಮಾಜದ ಮುಖಂಡರಾದ ಪ್ರವೀಣ್ ಶಾಮನೂರು, ಲಿಂಗರಾಜ್ ಫಣಿಯಾಪುರ, ಕರೂರು ಹನುಮಂತಪ್ಪ, ಹದಡಿ ರಾಜಪ್ಪ, ಶ್ರೀನಿವಾಸ್ ಗುಮ್ಮನೂರು, ಹೂವಿನಮಡು ಪ್ರವೀಣ್, ಸುರೇಶ್ ಗೋಶಾಲೆ ಮುಂತಾದವರು ಉಪಸ್ಥಿತರಿದ್ದರು.

# ಸೌರ ವಿದ್ಯುತ್‌ಗೆ 380 ಶತಕೋಟಿ ಡಾಲರ್ ಹೂಡಿಕೆ

**(1ನೇ ಪುಟದಿಂದ)** ದೇಶಗಳ ಸದಸ್ಯತ್ವ ಹೊಂದಿದೆ. ವರ್ಷಾಂತ್ಯದ ವೇಳೆಗೆ ಸದಸ್ಯತ್ವ 120ಕ್ಕೆ ತಲುಪಲಿದೆ ಎಂದೂ ಅವರು ಹೇಳಿದ್ದಾರೆ.

ದುರ್ಗಮ ಪ್ರದೇಶಗಳ ಸಣ್ಣ ಸೌರ ಘಟಕಗಳಿಗೆ ಹೂಡಿಕೆ ಸೆಳೆಯುವುದು ಸವಾಲಾಗಿದೆ. ಶೇ.74ರಷ್ಟು ಹೂಡಿಕೆ ಈಗ ಒ.ಇ.ಸಿ.ಡಿ. ಹಾಗೂ ಚೀನಾ ವಲಯಗಳಿಗೆ ತೆರಳುತ್ತಿದೆ. ಆಫ್ರಿಕಾಗೆ ಶೇ.2-3ರಷ್ಟು ಹೂಡಿಕೆ ಮಾತ್ರ ಸಿಗುತ್ತಿದೆ ಎಂದವರು ಹೇಳಿದ್ದಾರೆ.

# ಪುಣ್ಯ ಕಾರ್ಯಗಳೇ ನಮಗೆ ರಕ್ಷಾಕವಚ : ನಾಲ್ವಡಿ ಶ್ರೀ



### ಸಂಸ್ಕಾರದ ಕೊರತೆಯಿಂದ ಭಾರತೀಯತೆ ನಾಶ

**ಗುರುಕುಲ ಶಿಕ್ಷಣ ಪದ್ಧತಿ ನಾಶದಿಂದಾಗಿ ಸಂಸ್ಕೃತಿ ಸಂಸ್ಕಾರ ಮರೆಯಾಗಿದೆ. ಪ್ರತಿ ಮನೆಯಲ್ಲಿ ನಡೆಯುತ್ತಿದ್ದ ಭಜನೆ ಇಂದು ವಿಭಜನೆಯಾಗಿದೆ. ಭಾಗ್ಯದಾ ಲಕ್ಷ್ಮೀ ಬಾರಮ್ಮ ಹಾಡುತ್ತಿದ್ದ ಮಹಿಳೆಯರು ಟಿವಿಯಲ್ಲಿ ಲಕ್ಷ್ಮೀ ಬಾರಮ್ಮ ಧಾರಾವಾಹಿಗೆ ಅಂಟಿಕೊಂಡಿದ್ದಾರೆ.**

**ನಮ್ಮ ಪರಂಪರೆಯ ಉಡುಗೆ ತೊಡುಗೆಗಳೇ ಇಂದಿನ ಯುವ ಜನಾಂಗಕ್ಕೆ ಭಾರವಾಗಿವೆ. ಸಂಸ್ಕಾರದ ಕೊರತೆಯಿಂದ ಭಾರತೀಯತೆ ನಾಶವಾಗುತ್ತಿದೆ ಎಂದು ಹಿಂದೂ ಜಾಗರಣ ವೇದಿಕೆಯ ಪ್ರಾಂತ ಕಾರ್ಯಕಾರಿಣಿ ಸದಸ್ಯ ಘನರಾಜ್ ಭಟ್ ಕೆದಿಲಾ ಹೇಳಿದರು.**

**ನವರಾತ್ರಿ ಆಚರಣೆ ಸಾರ್ಥಕವಾಗಬೇಕಾದರೆ ನಮ್ಮ ಮನೆಗಳಲ್ಲಿ ಸಂಸ್ಕಾರ ಹೇಗಿದೆ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಸಂಸ್ಕೃತಿ, ಸಂಸ್ಕಾರ, ಆಚರಣೆಗಳ ಮೂಲಕ ನಮ್ಮ ದೇಶವನ್ನು ರಕ್ಷಣೆ ಮಾಡಿಕೊಳ್ಳಬೇಕಿದೆ ಎಂದು ಹೇಳಿದರು.**

**(1ನೇ ಪುಟದಿಂದ)** ಪ್ರಾಂತ ಕಾರ್ಯಕಾರಿಣಿ ಸದಸ್ಯ ಘನರಾಜ್ ಭಟ್ ಕೆದಿಲಾ ಮಾತನಾಡುತ್ತಾ, ಪ್ರಪಂಚದಲ್ಲಿ ಅತಿ ಹೆಚ್ಚು ದಾಳಿಗಳಿಗೆ ಒಳಗಾದದ್ದು ಭಾರತ ದೇಶ. ಆದಾಗ್ಯೂ ನಮ್ಮ ಸನಾತನ ಧರ್ಮ ಉಳಿದಿದೆ ಎಂದರೆ, ಅದಕ್ಕೆ ಕಾರಣ ಅಣು ರೇಣು ತೃಣಕಾಷ್ಟಗಳಲ್ಲಿ ದೇವರನ್ನು ಕಂಡಿದ್ದೇ ಕಾರಣ ಎಂದರು.

ಬಿದ್ದವನನ್ನು ಉದ್ಧರಿಸುವುದೇ ಧರ್ಮ. ಆದರ ಮೂಲ ಸ್ಥಾನ ಭಾರತದಲ್ಲಿದೆ. ಆದರೆ ಇಡೀ ಪ್ರಪಂಚಕ್ಕೆ ಧರ್ಮದ ಅರ್ಥ ಬೋಧಿಸುವ ಈ ಭಾರತದಲ್ಲಿ ಧಾರ್ಮಿಕ ಭಾಷಣಗಳು ಅಗತ್ಯವೇ ಎಂದು ಪ್ರಶ್ನಿಸುವ ದಿನಗಳು ಬಂದಿವೆ. ನಮ್ಮೊಳಗಿನ ಧರ್ಮ ಪ್ರಜ್ಞೆಯನ್ನು ನೆನಪಿಸಲು ಈ ಧಾರ್ಮಿಕ ಭಾಷಣದ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಪಠ್ಯದಲ್ಲಿ ತಿಳಿಸದಿದ್ದರೂ ತಾಯಿಯಲ್ಲಿ ದೇವರನ್ನು ಕಂಡು, ದೇವರಲ್ಲಿ ತಾಯಿ ಕಾಣಲು ಹೊರಟವರು ನಾವು. ಆದರೆ ಪಾಶ್ಚಾತ್ಯ ಸಂಸ್ಕೃತಿ ದಾಳಿಯಿಂದಾಗಿ ಸಂಸ್ಕೃತಿ, ಸಂಸ್ಕಾರಗಳನ್ನು ಕಡೆಗಣಿಸಿದ್ದೇವೆ. ಆತ್ಮದೊಳಗಿನ ಬ್ರಹ್ಮತ್ವ, ದೇವತ್ವ ತೋರಿಸುತ್ತಿದ್ದ ನಮ್ಮ ಗುರುಕುಲ ಶಿಕ್ಷಣ ಪದ್ಧತಿ ಮರೆಯಾಗಿ ಮೆಕಾಲೆಯ ಪಠ್ಯ ಕ್ರಮದಿಂದಾಗಿ ಸಂಸ್ಕೃತಿ, ಸಂಸ್ಕಾರ ನಾಶವಾಗುತ್ತಿದೆ. ಇದು ಮಾತ್ರ ಸಂಸ್ಕೃತಿಯನ್ನು ಬದಲಾಯಿಸಬೇಕೆಂದು ಹೊರಟ ಬ್ರಿಟೀಷರ ತಂತ್ರವಾಗಿತ್ತು ಎಂದರು.

9 ದಿನಗಳ ಶಕ್ತಿ ದೇವತೆ ಆರಾಧನೆ ಈ ಉತ್ಸವ, ಪ್ರಕೃತಿಯ ಆರಾಧನೆಯೂ ಹೌದು.ಕಷ್ಟ ಬಂದಾಗ ತಾಯಿಯ ಮೊರೆ ಹೋಗಬೇಕೆಂಬುದು ಪುರಾಣ ಕಥೆಗಳಿಂದಲೂ ತಿಳಿದು ಬಂದಿದೆ. ರಾವಣನನ್ನು ಸಂಹರಿಸಲು ರಾಮನಿಗೆ ಸಾಧ್ಯವಾಗದೇ ಇದ್ದಾಗ ರಾಮ ನವರಾತ್ರಿ ಉತ್ಸವ ಆಚರಿಸಿ, ದೇವಿಯ ಸಹಕಾರದಿಂದ ಯಶ ಸಾಧಿಸುತ್ತಾನೆ. ಪಾಂಡವರು ಮತ್ತೆ ಆಯುಧ ಹಿಡಿದದ್ದು ವಿಜಯದಶಮಿಯಂದು. ಅಂತಹ ಮಹತ್ವ ಈ ವಿಜಯದಶಮಿ ಹಬ್ಬಕ್ಕಿದೆ ಎಂದರು.

ಎನ್. ರಾಜಶೇಖರ್ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, 9 ದಿನಗಳ ಕಾಲ ಉತ್ಸವ ಯಶಸ್ವಿಯಾಗಿ ನಡೆಸಲು ಶ್ರಮಿಸಿದ ಮಹಿಳೆಯರು, ಯುವಕರು ಹಾಗೂ ನಾಯಕರಿಗೆ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗಿಯಾದವರಿಗೆ ಕೃತಜ್ಞತೆ ಅರ್ಪಿಸಿದರು.

ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಅಂಬುಛೇದನ ನಡೆಸಿಕೊಟ್ಟರು. ವಕೀಲ ಎಸ್.ಜಯಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕೆ.ಆರ್. ಮಲ್ಲಿಕಾರ್ಜುನ್ ಉಪಸ್ಥಿತರಿದ್ದರು. ಸತೀಶ್ ಪೂಜಾರಿ ಸ್ವಾಗತಿಸಿದರು. ಜಯಣ್ಣ ನಿರೂಪಿಸಿದರು. ಕು.ವರ್ಷಿಣಿ ಪ್ರಾರ್ಥಿಸಿದರು.

# ಅಂತರರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಗೆ ಚಾಲನೆ



**(1ನೇ ಪುಟದಿಂದ)** ಕಾರ್ಯದರ್ಶಿ ಕೆ.ಪಿ. ಚಂದ್ರಪ್ಪ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಜಿಲ್ಲಾ ಟೆನ್ನಿಸ್ ಒಕ್ಕೂಟದ ಅಧ್ಯಕ್ಷ ಎಸ್.ಎಂ. ಬ್ಯಾಡಗಿ ಸ್ವಾಗತಿಸಿದರು. ನಮ್ರತಾ ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಒಕ್ಕೂಟದ ಸದಸ್ಯರಾದ ಐನಳ್ಳಿ ಜಯದೀಪ್, ರಘು ಅಂಬರ್‌ಕರ್, ಶರತ್ ವಾಲಾವಲ್ಕರ್, ವಿನಯ್, ಹರ್ಷ, ವಿಶಾಲ್ ಸುರ್ವಿ, ಮಂಜುನಾಥ್, ಶರತ್ ರಾಜ್, ಮಂಜುನಾಥ್, ಅಶೋಕ್, ರುದ್ರೇಶ್ ಮತ್ತಿತರರು ಉಪಸ್ಥಿತರಿದ್ದರು.

# ಯಡಿಯೂರಪ್ಪ ಸಮರ್ಥ ನಾಯಕ, ಅವರ ನೇತೃತ್ವದಲ್ಲೇ ಚುನಾವಣೆ ಸೂಕ್ತ

**(1ನೇ ಪುಟದಿಂದ)** ತೀರ್ಮಾನ ಮಾಡುತ್ತದೆಯೋ ಕಾದು ನೋಡೋಣ. ನಾನು ಸಹ ರಾಜ್ಯ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಆಗಿದ್ದೆ ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪಕ್ಷ ಕಟ್ಟಿ ಬೆಳೆಸಿದವರು. ಯಡಿಯೂರಪ್ಪ ಅವರಂತಹ ಜಾತ್ಯತೀತ, ಸಮರ್ಥ ನಾಯಕ ಬೇಕು. ಅವರ ನೇತೃತ್ವದಲ್ಲೇ ಚುನಾವಣೆಗೆ ಹೋಗುವುದು ಸೂಕ್ತ ಎಂದು ಹೇಳಿದರು.

ಸಂಸದ ಸಿದ್ದೇಶ್ವರ ಅವರ ಬಗ್ಗೆ ನನಗೆ ಗೌರವವಿದೆ. ಅವರು ವಯಸ್ಸಿನಲ್ಲಿ ಹಿರಿಯರಾಗಿರಬಹುದು, ಪಕ್ಷದಲ್ಲಿ ನಾನು ಅವರಿಗಿಂತ ಹಿರಿಯ. ಪಕ್ಷಕ್ಕಾಗಿ ಎರಡು ಬಾರಿ ಜೈಲಿಗೆ ಹೋಗಿ ಬಂದಿದ್ದೇನೆ. ನನ್ನ ರಕ್ತದ ಪ್ರತಿ ಕಣದಲ್ಲೂ ಹಿಂದುತ್ವ ಇದೆ ಎಂದೂ ಅವರು ಇದೇ ಸಂದರ್ಭದಲ್ಲಿ ಹೇಳಿದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಜಾತಿ ಶಕ್ತಿಗಳ ಕಿತ್ತು ಹಾಕಲು ಪ್ರಧಾನಿ ಕರೆ**
ನವದೆಹಲಿ : ಜಾತಿ ಹಾಗೂ ಪ್ರಾಂತೀಯತೆಯ ಆಧಾರದ ಮೇಲೆ ದೇಶವನ್ನು ಒಡೆಯಲು ಯತ್ನಿಸುತ್ತಿರುವ ಶಕ್ತಿಗಳನ್ನು ಬೇರು ಸಮೇತ ಕಿತ್ತು ಹಾಕುವಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದಸರಾ ಸಂದರ್ಭದಲ್ಲಿ ಕರೆ ನೀಡಿದ್ದಾರೆ.

**ಬಡವರಿಗೆ ನೆರವು ಅತಿ ದೊಡ್ಡ ಕೆಲಸ : ಅಮಿತ್ ಷಾ**
ಅಹಮದಾಬಾದ್ : ದೇಶದ 60 ಕೋಟಿ ಬಡವರ ಶ್ರೇಯೋಭಿವೃದ್ಧಿ ಮೋದಿ ಸರ್ಕಾರದ ಅತಿ ದೊಡ್ಡ ಕೆಲಸವಾಗಿದೆ. ಆರ್ಥಿಕ ಅಭಿವೃದ್ಧಿ ಯೋಜನೆಗಳಿಂದ ಗ್ರಾಮಾಂತರ ಬಡವರಿಗೆ ಅತಿ ಹೆಚ್ಚಿನ ನೆರವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿದ್ದಾರೆ.

**ಸ್ಕೈರೂಟ್‌ನಿಂದ ವಿಕ್ರಮ್ - 1 ರಾಕೆಟ್ ಅನಾವರಣ**
ನವದೆಹಲಿ : ಬಾಹ್ಯಾಕಾಶ ನವೋದ್ಯಮ ಸಂಸ್ಥೆಯಾದ ಸ್ಕೈರೂಟ್ ಏರ್‌ಸ್ಪೇಸ್ ತಾನು ದೇಶೀಯವಾಗಿ ಅಭಿವೃದ್ಧಿ ಪಡಿಸಿರುವ ವಿಕ್ರಮ್ - 1 ರಾಕೆಟ್ ಅನ್ನು ಅನಾವರಣಗೊಳಿಸಿದೆ. ಮುಂದಿನ ವರ್ಷ ಈ ರಾಕೆಟ್ ಭೂಮಿಯ ತಳ ಕಕ್ಷೆಗೆ ಉಪಗ್ರಹಗಳನ್ನು ತಲುಪಿಸುವ ನಿರೀಕ್ಷೆ ಇದೆ.

**ಬಾಹ್ಯಾಕಾಶದಲ್ಲಿ ಮಹಿಳೆಯರ ಸಹಭಾಗಿತ್ವ ಹೆಚ್ಚಬೇಕು : ಸೋಮನಾಥ್**
ತಿರುವನಂತಪುರಂ : ದೇಶದ ಬಾಹ್ಯಾಕಾಶ ಯೋಜನೆಗಳಲ್ಲಿ ಮಹಿಳೆಯರ ಸಹಭಾಗಿತ್ವ ಹೆಚ್ಚಾಗಬೇಕು ಎಂಬುದು ತಮ್ಮ ಬಯಕೆ ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆಯ ಅಧ್ಯಕ್ಷ ಎಸ್. ಸೋಮನಾಥ್ ಹೇಳಿದ್ದಾರೆ.

**ಶೇ.75ರಷ್ಟು ಸ್ವನಿಧಿ ಫಲಾನುಭವಿಗಳು ಸಾಮಾನ್ಯೇತರ**
ನವದೆಹಲಿ : ಪಿಎಂ ಸ್ವನಿಧಿ ಯೋಜನೆಯ ಲಾಭ ಪಡೆದಿರುವವರಲ್ಲಿ ಶೇ.75ರಷ್ಟು ಜನ ಸಾಮಾನ್ಯೇತರ ವರ್ಗದವರು. ಇವರಲ್ಲಿ ಶೇ.44ರಷ್ಟು ಜನರು ಒ.ಬಿ.ಸಿ. ವರ್ಗದವರು ಎಂದು ಎಸ್.ಬಿ.ಐ. ರೂಪಿಸಿರುವ ಅಧ್ಯಯನ ತಿಳಿಸಿದೆ. ಬೀದಿ ಬದಿ ವ್ಯಾಪಾರಿಗಳಿಗೆ ನೆರವಾಗಲು ಸ್ವನಿಧಿ ಯೋಜನೆ ರೂಪಿಸಲಾಗಿದೆ.

**ಮ್ಯಾನ್‌ಮಾರ್‌ನಲ್ಲಿ ಇಬ್ಬರು ಉಗ್ರರ ಬಂಧನ**
ಇಂಫಾಲ್ : ಮ್ಯಾನ್‌ಮಾರ್‌ನ ಉಗ್ರವಾದಿ ಸಂಘಟನೆಗೆ ಸೇರಿದ ಇಬ್ಬರನ್ನು ಮಣಿಪುರದ ಚುರಚಂದಾಪುರ ಜಿಲ್ಲೆಯಲ್ಲಿ ಬಂಧಿಸಲಾಗಿದೆ. ಬಂಧಿತರಿಂದ ಶಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

**2030ರಲ್ಲಿ ಭಾರತ ಮೂರನೇ ಅತಿ ದೊಡ್ಡ ಆರ್ಥಿಕ ವ್ಯವಸ್ಥೆ**
ನವದೆಹಲಿ : 2030ರ ವೇಳೆಗೆ ಭಾರತದ ಆರ್ಥಿಕತೆಯ ಗಾತ್ರ 7.3 ಟ್ರಿಲಿಯನ್ ಡಾಲರ್‌ಗಳಿಗೆ ತಲುಪಲಿದೆ. ಆ ವೇಳೆಗೆ ಜಪಾನ್ ಹಿಂದೆ ಹಾಕಿ ಭಾರತ ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗಲಿದೆ ಎಂದು ಎಸ್ ಅಂಡ್ ಪಿ ಗ್ಲೋಬಲ್ ಮಾರ್ಕೆಟ್ ಇಂಟಲಿಜೆನ್ಸ್ ವರದಿ ತಿಳಿಸಿದೆ.

# ಡಿಜಿಟಲ್ ಗ್ರಂಥಾಲಯ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಪೂರಕ

## ಜಗಳೂರಿನ ಕಾರ್ಯಕ್ರಮದಲ್ಲಿ ರಾಯಚೂರು ಹೆಚ್ಚುವರಿ ಪೊಲೀಸ್ ಅಧೀಕ್ಷಕ ಶಿವಕುಮಾರ್ ದಂಡಿನ

ಜಗಳೂರು, ಅ. 24 - ಗ್ರಾಮದಲ್ಲಿ ಸರ್ಕಾರಿ ನೌಕರರ ಸಹಕಾರದಿಂದ ನೌಕರರ ಸಂಘ ರಚಿಸಿ, ಡಿಜಿಟಲ್ ಗ್ರಂಥಾಲಯ ತೆರೆಯಲಾಗಿದೆ. ಇದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗಲಿದೆ ಎಂದು ರಾಯಚೂರು ಹೆಚ್ಚುವರಿ ಪೊಲೀಸ್ ಅಧೀಕ್ಷಕ ಶಿವಕುಮಾರ್ ದಂಡಿನ ತಿಳಿಸಿದರು.

ತಾಲ್ಲೂಕಿನ ತಮಲೇಹಳ್ಳಿ ಗ್ರಾಮದ ಗಿರಿಜಾ ಸಭಾಭವನದಲ್ಲಿ ದಂಡಿನ ರಾಜಪ್ಪ ಪರಿವಾರ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ ದಂಡಿನ ರಾಜಪ್ಪ ಅವರ ಪುಣ್ಯ ಸ್ಮರಣೆ ಕಾರ್ಯಕ್ರಮದ ಸ್ಮರಣಾರ್ಥ ರಂಗಕರ್ಮಿ ಹಾಗೂ ಲೇಖಕ ಶಿವಕುಮಾರ್ ನಾಯಕ ದೊರೆ ವಿರಚಿತ 'ಬಲ್ಲಾಳ' ಕಾದಂಬರಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಳ್ಳಿಯ ಮಕ್ಕಳಿಗೆ ನವೋದಯ, ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗಳ ಪ್ರವೇಶಾತಿ ಸ್ಪರ್ಧಾತ್ಮಕ ಪರೀಕ್ಷೆಗೆ ಉಚಿತ ತರಬೇತಿ ನೀಡಲಾಗುವುದು ಎಂದು ಅವರು ತಿಳಿಸಿದರು.



ಲೇಖಕ ಶಿವಕುಮಾರ ನಾಯಕ ದೊರೆ ಮಾತನಾಡಿ, ದಂಡಿನ ರಾಜಪ್ಪ ಪರಿವಾರ ಪ್ರತಿಷ್ಠಾನ ಟ್ರಸ್ಟ್ ದವರು ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ನಾನು ರಚಿಸಿದ ಕಾದಂಬರಿ ಬಿಡುಗಡೆ, ನಾಟಕಾಭಿನಯ ವೇದಿಕೆಗಳು ನನಗೆ ಹರ್ಷ ತಂದಿವೆ ಎಂದರು.

ಮೈಸೂರು ಕೃಷಿ ತಜ್ಞ ಟಿ.ಜಿ.ಎಸ್. ಅವಿನಾಶ್ ಅವರು, ಜಾಗತಿಕ ತಾಪಮಾನ ಮತ್ತು ಕೃಷಿ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಸಂಶೋಧಕ ಹಾಗೂ ಉಪನ್ಯಾಸಕ ಇಮಾಂ ಸಾಬ್ ಹಡಗಲಿ, ಬಲ್ಲಾಳ ಕಾದಂಬರಿಯ ತಿರುಳನ್ನು ಕಥಾ ರೂಪದಲ್ಲಿ ತಿಳಿಸಿದ ಅವರು, ಲೇಖಕ ದಂಡಿನ ಶಿವಕುಮಾರ್ ಅವರು ರಚಿಸಿದ ಸುಂದರ ಬಲ್ಲಾಳ ಕಾದಂಬರಿಯಲ್ಲಿ, ಗೂಳಿ ಕಾಳಗ, ಜಾನಪದ ಸೊಗಡು, ನಾಟಿ ವೈದ್ಯಕೀಯ ಪದ್ದತಿ, ಪ್ರಾಣಿದಯೆ, ಕಾರಹುಣ್ಣಿಮೆ ಹಬ್ಬದಲ್ಲಿ ಕರಿ ಮತ್ತು ಬಿಳಿ ಎತ್ತುಗಳ ಓಟದ ಸ್ಪರ್ಧೆ, ರಂಗನ ಪ್ರೇಮಕಥನ, ಫಸಲಿನ ನಿರೀಕ್ಷೆ ಎಲ್ಲವೂ ಅಡಗಿವೆ ಎಂದು ಮಾಹಿತಿ ನೀಡಿದರು.

ಇದೇ ವೇಳೆ ಟ್ರಸ್ಟ್ ವತಿಯಿಂದ ಉರಿಮೆಯ ಹಿರಿಯ ಕಲಾವಿದರಿಗೆ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಟ್ರಸ್ಟ್ ನಲ್ಲಿ ಟೈಲರಿಂಗ್ ತರಬೇತಿ ಪಡೆದ ಫಲಾನುಭವಿಗಳಿಗೆ ಪ್ರಶಸ್ತಿ ಪತ್ರ, ವಿತರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯ ಮುಖಂಡ ಪೂಜಾರ್ ಅಂಗಡಿ ಬೋರಯ್ಯ, ಸಾಹಿತಿ ಎನ್.ಟಿ. ಎರ್ರಿಸ್ವಾಮಿ, ಮೈಸೂರು ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ. ರೇವಣ್ಣಸ್ವಾಮಿ, ಪ್ರಹ್ಲಾದ್, ಲತಾ, ಡಿಪಿ ಹನುಮಂತಪ್ಪ, ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸಮಾನ ವೇತನಕ್ಕಾಗಿ ಐಸ್‌ಲ್ಯಾಂಡ್‌ನಲ್ಲಿ ಪ್ರತಿಭಟನೆ

# ಪ್ರಧಾನ ಮಂತ್ರಿ ಸಹ ಪ್ರತಿಭಟನೆಯಲ್ಲಿ ಭಾಗಿ

ಹುಸಾವಿಕ್ (ಐಸ್‌ಲ್ಯಾಂಡ್), ಅ. 24 – ಸಮಾನ ವೇತನದ ಪರವಾಗಿ ಹಾಗೂ ಲಿಂಗ ಆಧರಿತ ಹಿಂಸೆಯ ವಿರುದ್ಧವಾಗಿ ಐಸ್‌ಲ್ಯಾಂಡ್‌ನಲ್ಲಿ ಬೃಹತ್ ಮುಷ್ಕರ ನಡೆಸಲಾಗಿದೆ. ಶಾಲೆ, ಅಂಗಡಿ, ಬ್ಯಾಂಕ್ ಸೇರಿದಂತೆ ಹತ್ತಾರು ವಲಯಗಳ ಕಾರ್ಮಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದು, ಅವರಿಗೆ ಪ್ರಧಾನ ಮಂತ್ರಿ ಸಹ ಜೊತೆಯಾಗಿದ್ದಾರೆ.

ಮಹಿಳೆಯರು ಹಾಗೂ ತೃತೀಯ ಲಿಂಗಿಗಳು ಮನೆ ಕೆಲಸವೂ ಸೇರಿದಂತೆ ಪಾವತಿ ಹಾಗೂ ಪಾವತಿಯೇತರ ಕೆಲಸ ಮಾಡದಂತೆ ಕಾರ್ಮಿಕ ಸಂಘಟನೆಗಳು ಕರೆ ನೀಡಿದ್ದವು.

ಮುಷ್ಕರದ ಅಂಗವಾಗಿ ಮನೆಯಲ್ಲೇ ಉಳಿಯುವುದಾಗಿ ಪ್ರಧಾನ ಮಂತ್ರಿ ಕ್ಯಾಟ್ರಿನ್ ಜಕೊಬ್ಸ್‌ಡೊಟಿರ್ ತಿಳಿಸಿದ್ದರು.

ಲಿಂಗ ಸಮಾನತೆಯ ಸೂಚ್ಯಂಕದಲ್ಲಿ ಐಸ್‌ಲ್ಯಾಂಡ್ ಕಳೆದ 14 ವರ್ಷಗಳಿಂದ ಮೊದಲ ಸ್ಥಾನ ಕಾಯ್ದುಕೊಂಡಿದೆ. ಶಿಕ್ಷಣ, ವೇತನ, ಆರೋಗ್ಯ ಮತ್ತಿತರೆ ಅಂಶಗಳನ್ನು ಆಧರಿಸಿ ವಿಶ್ವ ಆರ್ಥಿಕ ವೇದಿಕೆ ಈ ಶ್ರೇಯಾಂಕ ರೂಪಿಸುತ್ತಿದೆ.

ಐಸ್‌ಲ್ಯಾಂಡ್ ಶಾಸನ ಸಭೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದಾರೆ. ಸಂಪುಟದಲ್ಲೂ ಸಹ, ಅರ್ಧ ಸ್ಥಾನಗಳನ್ನು ಮಹಿಳೆಯರಿಗೇ ಮೀಸಲಿಡಲಾಗಿದೆ.


ಆದರೂ, ಐಸ್‌ಲ್ಯಾಂಡ್‌ನಲ್ಲಿ ಲಿಂಗದ ಆಧಾರದ ಮೇಲೆ ವೇತನದಲ್ಲಿ ವ್ಯತ್ಯಾಸ ಇದೆ ಎಂಬ ಆಕ್ಷೇಪಗಳಿವೆ. 1975ರಲ್ಲಿ ಐಸ್‌ಲ್ಯಾಂಡ್ ಲಿಂಗ ಸಮಾನತೆಗಾಗಿ ಬೃಹತ್ ಪ್ರತಿಭಟನೆ ಕಂಡಿತ್ತು. ಆಗ ಶೇ.90ರಷ್ಟು ಮಹಿಳೆಯರು ಕೆಲಸಕ್ಕೆ ಹಾಜರಾಗಿರಲಿಲ್ಲ.

ಮನೆ ಕೆಲಸ ಹಾಗೂ ಮಕ್ಕಳ ಚಾಕರಿ ಸಹ ಮಾಡದೇ ಪ್ರತಿಭಟನೆ ನಡೆಸಿದ್ದರು. ಇದರಿಂದಾಗಿ 1976ರಲ್ಲಿ ಐಸ್‌ಲ್ಯಾಂಡ್‌ನಲ್ಲಿ ಲಿಂಗ ಸಮಾನತೆಯ ಹಕ್ಕುಗಳ ಕಾಯ್ದೆ ಜಾರಿಗೆ ತರಲಾಗಿತ್ತು.

ಐಸ್‌ಲ್ಯಾಂಡ್ ಶಾಲೆ ಹಾಗೂ ಆರೋಗ್ಯ ವ್ಯವಸ್ಥೆಯಲ್ಲಿ ಮಹಿಳೆಯರೇ ಹೆಚ್ಚಿನ ಹೊಂದಿದ್ದಾರೆ. ಹೀಗಾಗಿ ಮುಷ್ಕರದಿಂದ ಈ ವಲಯಗಳ ಮೇಲೆ ಪರಿಣಾಮವಾಗಿದೆ.

## ದಸರಾ

ಸರಸರನೆ ಬಂದಿತು ದಸರಾ...
ಅಬ್ಬರದಲ್ಲಿ ನಿಂದಿತು ಬರ, ಬರ
ಮುನಿದ ವರುಣ ತರಲಿಲ್ಲ ವರ್ಷ
ಆದರೂ ದಸರಾ ತಂದಿತು ಹರ್ಷ!



ಭೂರಮೆಯ ಮೇಲಣ
ಅತ್ಯಾಚಾರ
ಮಾನವನು ಮಾಡಿದ
ಮಹಾಪಚಾರ
ನ್ಯಾಯ,
ನೀತಿ,ಸತ್ಯ,ಧರ್ಮಕ್ಕೆ
ಭಾಷ್ಪಾಂಜಲಿ
ಮದ, ಮೋಹ, ಮತ್ಸರ ಕ್ಕೆ
ತಿಲಾಂಜಲಿ!

ಚಂಡಿ, ಚಾಮುಂಡಿ, ಕಾಳಿ, ದುರ್ಗೆ
ನವ ರೂಪದಲಿ ಇಟ್ಟಿಹರಿಲ್ಲಿ ಲಗ್ಗೆ
ಶಿಷ್ಟರ ರಕ್ಷಣೆಗಾಗಿ ತಾಯ್ಮಡಿಲಿಗೆ
ದುಷ್ಟರ ದುಷ್ಟತನದ ಮಹಾ ಬಲಿಗೆ!

ಧರ್ಮ, ಧರ್ಮದ ನಡುವೆ ಹೆಚ್ಚಿದ ಕಿಚ್ಚು...
ಹಿಡಿದು, ಬಡಿದು ನೀ ಅವರನ್ನು ಕೊಚ್ಚು...
ಮಾನವನೆದೆಯಲ್ಲಿ ಆರಿಹುದು ತೇವ
ಸತ್ತೇ ಹೋಗಿಹುದು ಹೃನ್ಮನದ ಭಾವ!

ಕುಣಿಯುತ್ತಿಹುದು ಎಲ್ಲೆಡೆ ಕಾಂಚಾಣ
ಅವರಿವರದ್ದೋ... ಯಾರದ್ದೋ ಹಣ
ಬೀಳುತಿಹುದು ಬಡ ರೈತರವರ ಹೆಣ
ಸಿಗದು ಎಂದೂ ಇಲ್ಲಿ ಪರಿಹಾರ ಕಾಣ!

ಜನ ಸೇವಕರೆಲ್ಲಾ ಇಂದಿನ ರಾಜರು
ತೆರಿಗೆ ಹಣವ ಹೀರುವ ಮಹಾರಾಜರು
ಬೆಪ್ಪುತಕ್ಕಡಿಗಳಾದೆವೇ ನಾವೆಲ್ಲರೂ....
ಚಾಮುಂಡಿ ಉತ್ತರ ಕೊಡು ನೀ ದೇವರು!!
ನೀ... ದೇವರು...

**- ವೀಣಾ ಕೃಷ್ಣಮೂರ್ತಿ, ದಾವಣಗೆರೆ**

# ಮೋದಿ ಜೊತೆ ವೇದಿಕೆ ಹಂಚಿಕೊಳ್ಳುವುದಿಲ್ಲ

## ಮಿಜೋರಾಂ ಮುಖ್ಯಮಂತ್ರಿ ಜೊರೊಮತುಂಗ

ಐಜ್ವಾಲಾ ಅ. 24 – ಮುಂಬರುವ ವಿಧಾನಸಭಾ ಚುನಾವಣಾ ಪ್ರಚಾರದ ವೇಳೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಜೊತೆ ವೇದಿಕೆ ಹಂಚಿಕೊಳ್ಳುವುದಿಲ್ಲ ಎಂದು ಮಿಜೋರಾಂ ಮುಖ್ಯಮಂತ್ರಿ ಜೊರೊಮತಂಗ ಹೇಳಿದ್ದಾರೆ.

ನವೆಂಬರ್ 7ರಂದು ಮಿಜೋರಾಂ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ಮಾಡಲು ಪ್ರಧಾನಿ ಅಕ್ಟೋಬರ್ 30ರಂದು ಮಮಿತ್ ನಗರಕ್ಕೆ ಭೇಟಿ ನೀಡುವ ನಿರೀಕ್ಷೆ ಇದೆ.

ಮಿಜೋರಾಂನ ಎಲ್ಲ ಜನರು ಕ್ರಿಶ್ಚಿಯನ್ನರು. ಮಣಿಪುರದಲ್ಲಿ ನೂರಾರು ಚರ್ಚುಗಳನ್ನು ಸುಡಲಾಗಿದೆ. ಇದು ನಮ್ಮ ವಿಚಾರಗಳಿಗೆ ಸಂಪೂರ್ಣ ವಿರುದ್ಧವಾಗಿದೆ ಎಂದವರು ಹೇಳಿದ್ದಾರೆ.

ಈ ಬಾರಿ ಬಿಜೆಪಿ ಬಗ್ಗೆ ಸಹಾನುಭೂತಿ ಹೊಂದುವುದು ನಮ್ಮ ಪಕ್ಷಕ್ಕೆ ಹಿನ್ನಡೆಯಾಗಲಿದೆ. ಪ್ರಧಾನ ಮಂತ್ರಿ ಒಬ್ಬರೇ ಬರುವುದು ಹಾಗೂ ತಾವೇ ವೇದಿಕೆಯಲ್ಲಿರುವುದು ಒಳ್ಳೆಯದು. ನಾನು ಪ್ರತ್ಯೇಕ ವೇದಿಕೆಯಲ್ಲಿರುತ್ತೇನೆ ಎಂದು ಜೊರಮತಂಗ ಹೇಳಿದ್ದಾರೆ.

ಜೊರಮತಂಗ ಅವರ ಎಂ.ಎನ್.ಎಫ್. ಪಕ್ಷವು ಬಿಜೆಪಿ ನೇತೃತ್ವದ ಎನ್.ಇ.ಡಿ.ಎ. ಮೈತ್ರಿಕೂಟದ ಭಾಗವಾಗಿದೆ. ಆದರೆ, ಮಿಜೋರಾಂನಲ್ಲಿ ಅದು ಬಿಜೆಪಿ ಜೊತೆ ಕಾರ್ಯನಿರ್ವಹಿಸುತ್ತಿಲ್ಲ.

ತಮ್ಮ ಪಕ್ಷ ಕಾಂಗ್ರೆಸ್‌ಗೆ ಸಂಪೂರ್ಣ ವಿರುದ್ಧವಾಗಿರುವ ಕಾರಣ ಎನ್.ಇ.ಡಿ.ಎ. ಒಕ್ಕೂಟದಲ್ಲಿ ಸೇರಿದ್ದೇವೆ.

ನಾವು ಕಾಂಗ್ರೆಸ್ ಜೊತೆ ಯಾವುದೇ ಮೈತ್ರಿಕೂಟದ ಭಾಗವಾಗುವುದಿಲ್ಲ ಎಂದವರು ಹೇಳಿದ್ದಾರೆ.

# ಜಿಗಳಿಯಲ್ಲಿ ಸಂಭ್ರಮದ ವಿಜಯದಶಮಿ



ಮಲೇಬೆನ್ನೂರು, ಅ.24- ಜಿಗಳಿಯಲ್ಲಿ ಮಂಗಳವಾರ ವಿಜಯದಶಮಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ಸಂಜೆ ಗ್ರಾಮದ ಶ್ರೀ ರಂಗನಾಥ ಸ್ವಾಮಿ, ಶ್ರೀ ಬೀರಲಿಂಗೇಶ್ವರ ಮತ್ತು ಜಿ. ಬೇವಿನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ ದೇವರುಗಳ ಸಮ್ಮುಖದಲ್ಲಿ ಶಿಬಾರಕಟ್ಟೆಯಲ್ಲಿರುವ ಬನ್ನಿ ಮರದಲ್ಲಿ ಗ್ರಾಮಸ್ಥರು ಸಾಮೂಹಿಕ ಬನ್ನಿ ಮುಡಿದು, ನಂತರ ಪರಸ್ಪರ ಬನ್ನಿ ಪತ್ರೆ ವಿನಿಮಯ ಮಾಡಿಕೊಂಡು ದಸರಾ ಶುಭಾಶಯ ಕೋರಿದರು.

ಬುಧವಾರ ಜಿ.ಬೇವಿನಹಳ್ಳಿ ಮತ್ತು ಜಿಗಳಿಯಲ್ಲಿ ಮಹಿಳೆಯರು ದೇವರುಗಳಿಗೆ ಆರತಿ ಬೆಳಗುವ ಕಾರ್ಯಕ್ರಮ ಇರುತ್ತದೆ. ರಾತ್ರಿ ಜಿಗಳಿಯಲ್ಲಿ ದೇವರುಗಳ ಉತ್ಸವ ನಡೆಯಲಿದೆ.

# ತಂತ್ರಜ್ಞಾನ ದುರ್ಬಳಕೆಯಿಂದ ದಾರಿ ತಪ್ಪುವ ಯುವಕರು

## ರಾಣೇಬೆನ್ನೂರಿನ ಕರ್ನಾಟಕ ಸಂಘದ 87ನೇ ವರ್ಷದ ನಾಡಹಬ್ಬ ಕಾರ್ಯಕ್ರಮದಲ್ಲಿ ಬಿ.ಎಸ್. ಗೌಡರ್

ರಾಣೇಬೆನ್ನೂರು, ಅ.24- ತಂತ್ರಜ್ಞಾನದ ದುರ್ಬಳಕೆಯಿಂದ ಇಂದಿನ ಯುವಕರು ದಾರಿ ತಪ್ಪುತ್ತಿದ್ದಾರೆ. ಮನೆಯಲ್ಲಿ ಪಾಲಕರು ಉತ್ತಮ ವಾತಾವರಣ ನಿರ್ಮಿಸುವ ಮೂಲಕ ಮಕ್ಕಳಿಗೆ ಉತ್ತಮ ಸಂಸ್ಕಾರಗಳನ್ನು ಕೊಡುವುದು ಅತೀ ಅವಶ್ಯ ಎಂದು ನಿವೃತ್ತ ಪ್ರಾಚಾರ್ಯ ಬಿ.ಎಸ್. ಗೌಡರ್ ಹೇಳಿದರು.

ನಗರದ ಕರ್ನಾಟಕ ಸಂಘದಲ್ಲಿ ಜರುಗಿದ 87ನೇ ವರ್ಷದ ನಾಡಹಬ್ಬ ಕಾರ್ಯಕ್ರಮದ ಮೂರನೇ ದಿನದ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.




ಮೈಸೂರು ಮಹಾರಾಜರು ಕನ್ನಡ ನಾಡಿನಲ್ಲಿ ಮಾಡಿದ ಅಭಿವೃದ್ಧಿ ಕೆಲಸಗಳ ಬಗ್ಗೆ ವಿವರಿಸುತ್ತಾ, ಅಂದಿನ ಅಭಿವೃದ್ಧಿ ಕೆಲಸಗಳು ಇಂದಿಗೂ ನಮ್ಮ ಕಣ್ಣ ಮುಂದಿವೆ ಮತ್ತು ಅವುಗಳು ಶಾಶ್ವತವಾಗಿ ಇರಲಿವೆ ಎಂದು ಹೇಳಿದರು. ಸಂಘದ ಅಧ್ಯಕ್ಷ ಸಂಜೀವ ಶಿರಹಟ್ಟಿ ಅಧ್ಯಕ್ಷತೆ ವಹಿಸಿದ್ದರು.

ಸಭಾ ಕಾರ್ಯಕ್ರಮದ ನಂತರ ಬೆಂಗಳೂರಿನಿಂದ ಆಗಮಿಸಿದ್ದ ಅಂತರರಾಷ್ಟ್ರೀಯ ಜಾದೂ ಕಲಾವಿದ, ಮೋಡಿ ಆಟಗಾರ ಕಡಬ ಶ್ರೀನಿವಾಸ ಮತ್ತು ತಂಡದವರು ಜಾನಪದ ಶೈಲಿಯಲ್ಲಿ ಅದ್ಭುತವಾಗಿ ಜಾದೂ ಪ್ರದರ್ಶನ ನಡೆಸಿಕೊಟ್ಟರು. ವೀಕ್ಷಕರನ್ನೂ ಕಾರ್ಯಕ್ರಮಗಳಲ್ಲಿ ಬಳಸಿಕೊಂಡು ಅವರಿಂದಲೇ ಮ್ಯಾಜಿಕ್ ಮಾಡಿಸಿದ್ದು ವಿಶೇಷವಾಗಿತ್ತು. ಇವರೊಂದಿಗೆ ಆಗಮಿಸಿದ್ದ ಎಚ್.ಎ.ಎಲ್. ನಿವೃತ್ತ ಅಧಿಕಾರಿ, ಶಿಳ್ಳೆ ಗಾಯಕ ಟಿ. ಆರ್. ಲೋಕೇಶ್ ಹಳೆಯ ಚಲನಚಿತ್ರ ಗೀತೆಗಳನ್ನು ಶಿಳ್ಳೆಯಲ್ಲಿ ಹಾಡುವ ಮೂಲಕ ತಮ್ಮ ಪ್ರತಿಭೆ ಪ್ರದರ್ಶಿಸಿದರು. ಉಡುಪಿ ಪಾಂಡು ಅವರ ಶಿವತಾಂಡವ ನೃತ್ಯ ವೀಕ್ಷಕರನ್ನು ಭಕ್ತಿಯ ಲೋಕಕ್ಕೆ ಕರೆದೊಯ್ದಿತು.

ಶ್ರೀನಿಧಿ ಶಿರಹಟ್ಟಿ ನಾಡಗೀತೆ ಹಾಡಿದರು. ಶ್ರೀನಿವಾಸ ಏಕಬೋಟೆ ಸ್ವಾಗತಿಸಿದರು. ನಳಿನಿ ನಾಡಿಗೇರ ವಂದಿಸಿದರು. ಸಂಕಪ್ಪ ಮಾರನಾಳ ಕಾರ್ಯಕ್ರಮ ನಿರ್ವಹಿಸಿದರು.

# ಕೊಮಾರನಹಳ್ಳಿಯಲ್ಲಿ ಸಂಭ್ರಮದ ರಥೋತ್ಸವ



ಮಲೇಬೆನ್ನೂರು, ಅ.24- ವಿಜಯ ದಶಮಿ ಹಬ್ಬದ ಅಂಗವಾಗಿ ಕೊಮಾರನಹಳ್ಳಿಯಲ್ಲಿ ಮಂಗಳವಾರ ಹೆಳವನಕಟ್ಟೆ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿಯ ಬ್ರಹ್ಮ ರಥೋತ್ಸವವು ಸಂಭ್ರಮದಿಂದ ಜರುಗಿತು. ರಥದಲ್ಲಿ ಶ್ರೀ ರಂಗನಾಥ ಸ್ವಾಮಿಯ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿದ ನಂತರ ರಥಕ್ಕೆ ಪೂಜೆ ಸಲ್ಲಿಸಿ, 'ಗೋವಿಂದಾ ಗೋವಿಂದಾ' ಎಂಬ ಜಯಘೋಷದೊಂದಿಗೆ ನೂರಾರು ಭಕ್ತರು ರಥ ಎಳೆದು ಸಂಭ್ರಮಿಸಿದರು. ಈ ವೇಳೆ ಭಕ್ತರು ರಥದ ಮೇಲೆ ಬಾಳೆಹಣ್ಣು ಎಸೆದು ಭಕ್ತಿ ಸಮರ್ಪಿಸಿದರು. ವಿವಿಧ ವಾದ್ಯ ಮೇಳಗಳು ರಥೋತ್ಸವಕ್ಕೆ ಮೆರಗು ತಂದವು. ವರ್ಷದಲ್ಲಿ ಎರಡು ಬಾರಿ ರಥೋತ್ಸವ ನಡೆಯುವುದು ಈ ಕೊಮಾರನಹಳ್ಳಿಯ ವಿಶೇಷವಾಗಿದೆ.

# ಮಾದನಬಾವಿಯಲ್ಲಿ ಇಂದಿನಿಂದ ಮೂರು ದಿನ ರಾಜ್ಯಮಟ್ಟದ ಕೃಷಿ ಮೇಳ





ಹೊನ್ನಾಳಿ, ಅ. 24 - ಪ್ರಕೃತಿ ವೈಫಲ್ಯದ ಸಮನ್ವಯ ಸಾಂಗತ್ಯ ಎಂಬ ಶೀರ್ಷಿಕೆಯಡಿ ರಾಜ್ಯಮಟ್ಟದ ಕೃಷಿ ಮೇಳವನ್ನು ನಾಳೆ ದಿನಾಂಕ 25ರಿಂದ ಮೂರು ದಿನ ನ್ಯಾಮತಿ ತಾಲ್ಲೂಕಿನ ಶ್ರೀ ಗವಿಸಿದ್ದೇಶ್ವರ ಸೇವಾ ಸಮಿತಿ 18 ಹಳ್ಳಿ ಕಟ್ಟೆಮನೆ ದೊಡ್ಡಕಲ್ಲುಕಟ್ಟೆ ಮಾದನಬಾವಿ ಗ್ರಾಮಸ್ಥರಿಂದ ಆಯೋಜಿಸಲಾಗಿದೆ ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಬಿ. ಕರಿಬಸಪ್ಪ ತಿಳಿಸಿದ್ದಾರೆ.

ಬರಗಾಲಕ್ಕೆ ಸಂಬಂಧಿಸಿದ ಮಾಹಿತಿಯನ್ನು ರಾಜ್ಯದ ಗಣ್ಯರು, ಕೃಷಿ ಕ್ಷೇತ್ರದ ಸಾಧಕರು, ವಿಜ್ಞಾನಿಗಳಿಂದ ರೈತ ಸಮುದಾಯಕ್ಕೆ ಮಾಹಿತಿಯನ್ನು ತಿಳಿಸುವ ಸಲುವಾಗಿ ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಈ ಕೃಷಿ ಮೇಳವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಶಾಸಕ ಡಿ.ಜಿ.ಶಾಂತನಗೌಡ ಉದ್ಘಾಟಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಇರುವಕ್ಕಿ ಬಳಿ ಇರುವ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ಕುಲಪತಿ ಆರ್.ಸಿ. ಜಗದೀಶ್, ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ ಹಾಗೂ ಇತರರು ಆಗಮಿಸಲಿದ್ದಾರೆ.

ಮಧ್ಯಾಹ್ನ 1 ಗಂಟೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಾಂಸ್ಕೃತಿಕ ಸೌರಭ ಗೋಷ್ಠಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಹಾಸನ ಮಾಜಿ ಶಾಸಕ ಪ್ರೀತಂಗೌಡ, ವಿಧಾನಪರಿಷತ್ ಸದಸ್ಯ ಡಿ.ಎಸ್. ಅರುಣ್ ಹಾಗೂ ತರೀಕೆರೆ ಶಾಸಕ ಶ್ರೀನಿವಾಸ್ ಭಾಗವಹಿಸಲಿದ್ದಾರೆ.

ಬೀಜಗಳ ಸಂರಕ್ಷಣೆ ಹಾಗೂ ಬೀಜೋಪಚಾರ, ರೇಷ್ಮೆ ಕೃಷಿಯಲ್ಲಿ ಆಧುನಿಕ ಸಂರಕ್ಷಣೆ, ತರಕಾರಿ ಸಸಿಗಳ ಸಂರಕ್ಷಣೆ ಹಾಗೂ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ ಕುರಿತು ಉಪನ್ಯಾಸಗಳು ನಡೆಯಲಿವೆ.

ದಿನಾಂಕ 26ರ ಗುರುವಾರ ಆರುಂಡಿ ಕೆ. ಮಂಜಪ್ಪ ಅವರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ, ಬೆಳಿಗ್ಗೆ 10.30ಕ್ಕೆ ರೈತಪರ ಗೋಷ್ಠಿಗಳು ನಡೆಯಲಿವೆ. ಈ ಗೋಷ್ಠಿಯಲ್ಲಿ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ, ಅರಸಿಕೆರೆ ಶಾಸಕ ಶಿವಲಿಂಗೇಗೌಡ, ಶಿವಮೊಗ್ಗ ಶಾಸಕ ಚನ್ನಬಸಪ್ಪ, ಶಿವಮೊಗ್ಗ ಗ್ರಾಮಾಂತರ ಶಾಸಕರಾದ ಶಾರದ ಪೂರ್ಯಾನಾಯ್ಕ್, ಹರಿಹರ ಶಾಸಕ ಬಿ.ಪಿ. ಹರೀಶ್, ಪಿ.ಐ. ಸಿದ್ದೇಗೌಡ ಹಾಗೂ ಇತರರು ಉಪಸ್ಥಿತರಿರುತ್ತಾರೆ. ಅಡಿಕೆ, ತೆಂಗು ಬೆಳೆಗಳ ಅಂತರ ಬೆಳೆ ಪದ್ದತಿ, ಕಳೆನಾಶಕ ಭೂಮಿಯ ಫಲವತ್ತತೆ, ಪುಷ್ಪ ಕೃಷಿ ಹಾಗೂ ಹಣ್ಣು ಕೃಷಿ ಬೇಸಾಯ, ತುಂತುರು ನೀರಾವರಿ ಹಾಗೂ ನೀರಿನ ಸಂರಕ್ಷಣೆ ಬಗ್ಗೆ ಉಪನ್ಯಾಸಗಳು ನಡೆಯಲಿವೆ ಎಂದು ಮಾಹಿತಿ ನೀಡಿದರು.

ದಿನಾಂಕ 27 ರಂದು ಬೆಳಗ್ಗೆ 10 ಕ್ಕೆ ವೀರಭದ್ರೇಶ್ವರ ಭಜನಾ ಸಂಘ ಮಾದನಬಾವಿ ಇವರಿಂದ ಭಜನಾ ಕಾರ್ಯಕ್ರಮ ನಡೆಯಲಿದೆ, ಅಂದು ಜಾನುವಾರುಗಳ ರೋಗಬಾಧೆ ಮತ್ತು ನಿವಾರಣೆ, ಆಧುನಿಕ ಹಸುಗಳ ಸಾಕಾಣಿಕೆಯಲ್ಲಿ ಪೋಷಕಾಂಶಗಳು ಮತ್ತು ಮೇವಿನ ಸಂಸ್ಕರಣೆ ಬಗ್ಗೆ ಉಪನ್ಯಾಸ ನಡೆಯಲಿದೆ ಮತ್ತು ಮಧ್ಯಾಹ್ನ 1 ಗಂಟೆಗೆ ಜಾನಪದ ಗಾಯಕ ಎಚ್. ಕಡದಕಟ್ಟೆ ತಿಮ್ಮಪ್ಪ ಮತ್ತು ಎನ್‌ಎಸ್‌ಎಸ್ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಮಧ್ಯಾಹ್ನ 2 ಕ್ಕೆ ಗೋಷ್ಠಿ ಹಮ್ಮಿಕೊಳ್ಳಲಾಗಿದೆ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಡಿ.ಜಿ. ಶಾಂತನಗೌಡ ವಹಿಸಲಿದ್ದಾರೆ, ಮುಖ್ಯ ಅತಿಥಿಗಳಾಗಿ ಶಿಕ್ಷಣ ಸಚಿವ ಮಧುಬಂಗಾರಪ್ಪ, ಕಡೂರು ಶಾಸಕ ಆನಂದ್, ಜಗಳೂರು ಶಾಸಕ ದೇವೇಂದ್ರಪ್ಪ, ಡಿಸಿಸಿ ಬ್ಯಾಂಕ್ ನಿರ್ದೇಶಕ ಕೆ.ಎಚ್. ಷಣ್ಮುಖಪ್ಪ, ಬಿಇಒ ಎನ್.ಸಿ. ನಂಜರಾಜ ಸೇರಿದಂತೆ ಮತ್ತಿತರೆ ಗಣ್ಯರು ಭಾಗವಹಿಸಲಿದ್ದಾರೆ.

**ಕೃಷಿ ಮೇಳದ ಪ್ರಮುಖ ಆಕರ್ಷಣೆ:** ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಪ್ರಖ್ಯಾತ ಹಳ್ಳಿಕಾರ್ ಬಲಿಷ್ಠ ಬೀಜದ ಹೋರಿ ಪ್ರದರ್ಶನವೂ ಕೂಡ ಈ ಮೇಳದ ವಿಶೇಷತೆಯಾಗಿರುತ್ತದೆ ಎಂದು ಕರಿಬಸಪ್ಪ ವಿವರಿಸಿದರು.

ಈ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷ ಆರ್.ಎಸ್. ರುದ್ರಪ್ಪ, ಗೌರವಾಧ್ಯಕ್ಷ ದಿಳ್ಳಿ ಭರ್ಮಪ್ಪ, ದ್ಯಾಮಪ್ಪ, ಬಸವರಾಜಪ್ಪ, ಶೇಖರಪ್ಪ, ಅರಬಗಟ್ಟೆ ಸತೀಶ್, ಗೌರಪ್ಪ, ಬಸವರಾಜು, ಬಸವನಹಳ್ಳಿ ಎನ್.ಸಿ. ದೇವರಾಜ್, ಗ್ರಾ.ಪಂ. ಸದಸ್ಯರಾದ ಕೆಂಚಪ್ಪ, ರುದ್ರಪ್ಪ ನಾಗರಾಜ್, ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಸಿದ್ದರಾಮಯ್ಯ- ಕುಮಾರಸ್ವಾಮಿ ನಡುವೆ ವಾಕ್ಸಮರ

ಬೆಂಗಳೂರು, ಅ.24 - ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮಾಜಿ ಮುಖ್ಯಮಂತ್ರಿ, ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರ ನಡುವಿನ ವಾಕ್ ಸಮರ ತಾರಕಕ್ಕೇರಿದೆ.

ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಏನು ಮಾಡುತ್ತಿದ್ದರು ಎಂದು ಸಿದ್ದರಾಮಯ್ಯ ನೀಡಿದ ಮಾರ್ಮಿಕ ಹೇಳಿಕೆಗೆ ತಿರುಗೇಟು ನೀಡಿರುವ ಕುಮಾರಸ್ವಾಮಿ, ಜಾರ್ಜ್ ಮನೆಯಲ್ಲಿ ನೀವು ನಡೆಸಿದ ಸಿದ್ದಲೀಲೆ ಈಗಲಾದರೂ ಬಹಿರಂಗ ಮಾಡುತ್ತೀರಾ ಎಂದು ಸವಾಲು ಎಸೆದಿದ್ದಾರೆ. ಸಿದ್ದವನದಲ್ಲಿ ಹೆಣೆದ ಸಿದ್ಧ ಸೂತ್ರ ನನಗೆ ಗೊತ್ತಿಲ್ಲದ ಚಿದಂಬರ ರಹಸ್ಯವೇನಲ್ಲ, ನಿಮ್ಮ ಲೀಲೆಗಳು ನನಗೆ ತಿಳಿಯದ ವಿಚಾರವೇನಲ್ಲ.

ಮುಖ್ಯಮಂತ್ರಿ ಆಗಿದ್ದಾಗ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಉಳಿದುಕೊಳ್ಳುತ್ತಿದ್ದುದಕ್ಕೆ ವಿಧಾನಸಭೆ ಒಳಗೆ ಮತ್ತು ಹೊರಗೆ ಅನೇಕ ಬಾರಿ ಉತ್ತರಿಸಿದ್ದೇನೆ. ಜಾರ್ಜ್ ಮನೆಯಲ್ಲಿನ ನಿಮ್ಮ ಲೀಲೆಗಳನ್ನು ಒಮ್ಮೆ ಮಾತ್ರ ಬಹಿರಂಗಪಡಿಸಿ ಸಾಕು ಎಂದು ಸವಾಲು ಹಾಕಿದ್ದಾರೆ.

ಮುಖ್ಯಮಂತ್ರಿ ಅವರು ನಿನ್ನೆ ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿ, ಕುಣಿಯಲಾರದವರು ನೆಲ ಡೊಂಕು ಎಂದು ಹೇಳುವಂತೆ ತಮ್ಮ ಸರ್ಕಾರವನ್ನು ಉಳಿಸಿಕೊಳ್ಳಲು ಆಗದವರು ಬೇರೆಯವರ ಮೇಲೆ ಆರೋಪ ಹೊರಿಸಿರುವುದು ನಿರರ್ಥಕ ಎಂದಿದ್ದರು.

ಮುಖ್ಯಮಂತ್ರಿಯವರು ವಿಶ್ವಕಪ್ ಕ್ರಿಕೆಟ್ ವೀಕ್ಷಿಸಲು ತೆರಳಿದ್ದಕ್ಕೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಟೀಕಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಕ್ರಿಕೆಟ್ ಕ್ರೀಡೆಯನ್ನು ಬೆಂಬಲಿಸಲು ತೆರಳಲಾಗಿತ್ತು. ಅವರು ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಇದ್ದ ಕಾರಣವನ್ನು ಮೊದಲು ತಿಳಿಸಲಿ ಎಂದು ಹೇಳಿದ್ದರು.

ಇದಕ್ಕೆ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಕುಮಾರಸ್ವಾಮಿ, ಕುಣಿಯಲಾರದವನಿಗೆ ನೆಲ ಡೊಂಕು ಎನ್ನುವ ಮಾತೇನೋ ಸರಿ, ಆದರೆ, ಕುಣಿಯಲು ಬಿಟ್ಟು ನೆಲ ಅಗೆಯುವ ಮೈತ್ರಿದ್ರೋಹಕ್ಕೆ ಏನು ಹೇಳುವುದು ಎಂದು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

## ವಿಜಯದಶಮಿಯು ವಿಜಯ ಉಂಟುಮಾಡಲಿ

ದಶಮಿ ಬಂದಿದೆ ವಿಜಯದಶಮಿ ಬಂದಿದೆ
ದಶಶಿರನ ಸಂಹರಿಸಿದ ದಿನವು ಬಂದಿದೆ
ದಶ ದಿನದ ಯುದ್ಧದ ವಿಜಯವು ಆಗಿದೆ
ದಶದಿಶೆಯಲಿ ಜಯಘೋಷ ಕೇಳಿಬರುತಿದೆ

ಶುಂಭನಿಶುಂಭಾಧಿ ರಾಕ್ಷಸರ ಸಂಹರಿಸಿದ
ಶಾಂಭವಿ ಉತ್ಸವವು ಎಲ್ಲೆಡೆ ನಡೆದಿದೆ
ಅಂಬೆಯ ಕಳುಹಿಸಿಕೊಡುವ ಕಾರ್ಯ ನಡೆದಿದೆ
ಅಂಬಿಕೆಗೆ ಉಡಿಅಕ್ಕಿ ಇಟ್ಟು ಬೀಳ್ಕೊಡುತಿದೆ

ಶೃಂಗಾರವಾಗಿ ತಾಯಿ ಪಲ್ಲಕ್ಕಿ ಏರಿಹಳು
ಮಂಗಳಮಾಡುತ ಜಗಕೆ ನಸುನಗುತಿಹಳು
ಮಂಗಳೆಯು ಭಕ್ತರ ಆತಿಥ್ಯವನ್ನು ಸ್ವೀಕರಿಸಿ
ಮಂಗಳ ಮಾಡಿ ಹೊರಡಲು ಸಿದ್ಧಳಾಗಿಹಳು

ಮಾತೃವಾತ್ಸಲ್ಯದಿಂದ ಈಕ್ಷಿಸುತಿಹಳು
ಮಾತೆಯು ಸಂತೃಪ್ತಿಯಲಿ ನಲಿಯುತ್ತಿಹಳು
ಅತಿಘೋರ ರಾಕ್ಷಸರ ಅಟ್ಟಹಾಸ ಮುರಿದವಳು
ಸತ್ವಭರಿತ ಬಾಲಗೋಪಾಲ ವಿಠಲನನುಜೆಯು

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

## ಸಂಚಿನಿಂದ ಮಣಿಪುರದಲ್ಲಿ ಹಿಂಸಾಚಾರ : ಆರ್.ಎಸ್.ಎಸ್.

ನಾಗಪುರ, ಅ. 24 – ಮಣಿಪುರದಲ್ಲಿ ಸಂಚಿನಿಂದ ಹಿಂಸಾಚಾರ ನಡೆಸಲಾಗಿದೆ. ಇದರ ಹಿಂದೆ ವಿದೇಶಿ ಶಕ್ತಿಗಳ ಕೈವಾಡ ಇದೆ ಎಂದು ಆರ್.ಎಸ್.ಎಸ್. ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ಮಣಿಪುರದಲ್ಲಿ ಮೀಟಿ ಹಾಗೂ ಕುಕಿ ಸಮುದಾಯದವರು ಸುದೀರ್ಘ ಕಾಲದಿಂದ ಜೊತೆಯಾಗಿದ್ದಾರೆ. ಇದು ಗಡಿ ರಾಜ್ಯವಾಗಿದೆ. ಇಂತಹ ಪ್ರತ್ಯೇಕತಾವಾದಿ ಹಾಗೂ ಆಂತರಿಕ ಸಂಘರ್ಷದಿಂದ ಯಾರಿಗೆ ಲಾಭವಾಗುತ್ತದೆ ? ಹೊರಗಿನ ಶಕ್ತಿಗಳಿಗೆ ಲಾಭವಾಗುತ್ತದೆ. ಈ ಹಿಂಸೆಯಲ್ಲಿ ಹೊರಗಿನವರು ಭಾಗಿಯಾಗಿದ್ದಾರೆ ಎಂದು ಭಾಗವತ್ ಹೇಳಿದ್ದಾರೆ.

ನಾಗಪುರದಲ್ಲಿ ಆಯೋಜಿಸಲಾಗಿದ್ದ ಆರ್.ಎಸ್.ಎಸ್.ನ ದಸರಾ ಸಮಾವೇಶದಲ್ಲಿ ಮಾತನಾಡಿದ ಅವರು, ಮಣಿಪುರದಲ್ಲಿ ಶಾಂತಿ ನೆಲೆಸುವ ದಾರಿ ಕಂಡು ಬರುತ್ತಿದೆ. ಮಣಿಪುರದಲ್ಲಿ ಶಾಂತಿ ನೆಲೆಸಲು ಸಂಘದ ಕಾರ್ಯಕರ್ತರು ಕಾರ್ಯನಿರ್ವಹಿಸಿರುವುದು ಹೆಮ್ಮೆ ತಂದಿದೆ ಎಂದೂ ಅವರು ಹೇಳಿದ್ದಾರೆ.

# ಮುರುಘಾ ಮಠ ಸರ್ವ ಜನಾಂಗದ ಶಾಂತಿಯ ತೋಟ



**ಶರಣ ಸಂಸ್ಕೃತಿ ಉತ್ಸವದಲ್ಲಿ ಅಥಣಿ ಗಚ್ಚಿನಮಠದ ಶ್ರೀ ಶಿವಬಸವ ಮಹಾಸ್ವಾಮೀಜಿ ಶ್ಲಾಘನೆ**

ಚಿತ್ರದುರ್ಗ, ಅ.24- ಶರಣ ಸಂಸ್ಕೃತಿ ಉತ್ಸವ 2023ರ ಅಂಗವಾಗಿ ಚಿನ್ಮೂಲಾದ್ರಿ ಮೇಲುದುರ್ಗದ ಶ್ರೀ ಮುರುಘಾಮಠದ ಆವರಣದಲ್ಲಿ ಬಿಚ್ಚುಗತ್ತಿ ಭರಮಣ್ಣ ನಾಯಕ ವೇದಿಕೆಯಲ್ಲಿ ಇಂದು ಸಂಜೆ ಚಿತ್ರದುರ್ಗದ ರಾಜವಂಶಸ್ಥರಿಂದ ಭಕ್ತಿಸಮರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಸಮ್ಮುಖ ವಹಿಸಿ ಮಾತನಾಡಿದ ಕನಕಪುರದ ಶ್ರೀ ಮರಳೇಗವಿ ಮಠದ ಶ್ರೀ ಚರಮೂರ್ತಿ ಮುಮ್ಮಡಿ ಶಿವರುದ್ರ ಸ್ವಾಮೀಜಿ, ಗುರು ಮುಟ್ಟಿದ್ದು ಗುಡ್ಡ ಎನ್ನುತ್ತಾರೆ, ಗುರುಕೃಪೆಯಾದರೆ ಎಲ್ಲವೂ ಸುಗಮವಾಗಿ ಸಾಗುತ್ತದೆ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ.

ಬಸವಾದಿ ಶರಣರ ಸಾಲಿನಲ್ಲಿ ಸಾಗುವಂತಹ ಮಠ ಶ್ರೀ ಮುರುಘಾ ಮಠವಾಗಿದೆ. ಗುರುಗಳಿಂದ ರಾಜರು, ಮುರುಗಿ ಸ್ವಾಮಿಗಳ ಕೃಪೆಯಿಂದ ಭರಮಣ್ಣ ನಾಯಕ ರಾಜನಾಗಿದ್ದು ಅವರ ವಂಶಸ್ಥರು ಆ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ಶ್ಲಾಘನೀಯ ಎಂದು ನುಡಿದರು.

ಶರಣ ಸಂಸ್ಕೃತಿ ಉತ್ಸವ-2023ರ ಗೌರವಾಧ್ಯಕ್ಷರಾದ ಅಥಣಿ ಗಚ್ಚಿನಮಠದ ಶ್ರೀ ಶಿವಬಸವ ಮಹಾಸ್ವಾಮೀಜಿ ಮಾತನಾಡಿ, ಮುರುಘಾ ಮಠವು ನೂರಾರು ವರ್ಷಗಳಿಂದ ಸರ್ವಸಮಾಜಕ್ಕೆ ಧಾರ್ಮಿಕ ಸಮಾನತೆಯನ್ನು ನೀಡಿರುವಂತಹ ಪರಂಪರೆಯಿದೆ. ಶ್ರೀಮಠವು ಸರ್ವ ಜನಾಂಗದ ಶಾಂತಿಯ ತೋಟವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗುರುಮಠಕಲ್ ಖಾಸಾ ಶ್ರೀ ಮುರುಘಾ ಮಠದ ಶ್ರೀ ಶಾಂತವೀರ ಗುರುಮುರುಘ ರಾಜೇಂದ್ರ ಸ್ವಾಮೀಜಿ, ಉಸ್ತುವಾರಿ ಶ್ರೀಗಳಾದ ಶ್ರೀ ಬಸವಪ್ರಭು ಸ್ವಾಮೀಜಿ, ರಾವಂದೂರು ಮುರುಘಾ ಮಠದ ಶ್ರೀ ಮೋಕ್ಷಪತಿ ಮಹಾಸ್ವಾಮೀಜಿ, ಎಸ್.ಜೆ.ಎಂ. ವಿದ್ಯಾಪೀಠದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಭರತ್‌ಕುಮಾರ್, ಶರಣಸಂಸ್ಕೃತಿ ಉತ್ಸವ-2023ರ ಕಾರ್ಯಾಧ್ಯಕ್ಷ ಕೆ.ಸಿ.ನಾಗರಾಜ್, ರಾಜವಂಶಸ್ಥರುಗಳಾದ ಶ್ರೀ ಬಿ.ಎಸ್.ಮದಕರಿ ನಾಯಕ, ಪರಶುರಾಮ ನಾಯಕ ಮತ್ತು ಪಿ.ಕಿರಣ್ ಕುಮಾರ್, ಶ್ರೀ ಪ್ರಸನ್ನಕುಮಾರ್ ಉಪಸ್ಥಿತರಿದ್ದರು.

ಗೊಂಚಿಗಾರ್ ಪ್ರಾರ್ಥಿಸಿ, ಟಿ.ಪಿ.ಜ್ಞಾನಮೂರ್ತಿ ನಿರೂಪಿಸಿದರು.

ಶ್ರೀಮಠದಲ್ಲಿ ಪುಷ್ಪಾಲಂಕೃತ ಕರ್ತೃ ಮುರುಘೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಶರಣ ಸಂಸ್ಕೃತಿ ಉತ್ಸವ-2023ರ ಗೌರವಾಧ್ಯಕ್ಷ ಅಥಣಿ ಗಚ್ಚಿನಮಠದ ಶ್ರೀ ಶಿವಬಸವ ಮಹಾಸ್ವಾಮೀಜಿ, ಚಿತ್ರದುರ್ಗದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಶ್ರೀ ಜಗದ್ಗುರು ಬಸವ ಮಾಚಿದೇವ ಸ್ವಾಮೀಜಿ, ಶ್ರೀ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಮಹಾಸ್ವಾಮೀಜಿ, ಶ್ರೀ ಬಸವ ರಮಾನಂದ ಸ್ವಾಮೀಜಿ, ಪ್ರಧಾನ ಸತ್ರ ಮತ್ತು ಜಿಲ್ಲಾ ನ್ಯಾಯಾಧೀಶರು ಹಾಗು ಶ್ರೀ ಮುರುಘಾಮಠದ ಆಡಳಿತಾಧಿಕಾರಿಗಳಾದ ಶ್ರೀಮತಿ ಬಿ.ಎಸ್.ರೇಖಾ, ಎಸ್.ಜೆ.ಎಂ.ವಿದ್ಯಾಪೀಠದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಭರತ್‌ಕುಮಾರ್, ಶರಣಸಂಸ್ಕೃತಿ ಉತ್ಸವ-2023ರ ಕಾರ್ಯಾಧ್ಯಕ್ಷ ಕೆ.ಸಿ. ನಾಗರಾಜ್, ಹರ ಗುರು ಚರಮೂರ್ತಿಗಳು ಉಪಸ್ಥಿತರಿದ್ದರು.

# ದಶ ವಲಯ ವೃದ್ಧಿಯಿಂದ ದೇಶ ಅಭಿವೃದ್ಧಿ

## ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ. ರಿಜಿಸ್ಟ್ರಾರ್ ಬಿ.ಇ. ರಂಗಸ್ವಾಮಿ



ದಾವಣಗೆರೆ, ಅ. 24 - ಕೃಷಿ, ಕಂಪ್ಯೂಟರ್, ಸಂಪರ್ಕ, ರಕ್ಷಣೆ, ಇ - ಆಡಳಿತ, ಇ - ವಾಣಿಜ್ಯ, ಇಂಧನ, ಶಿಕ್ಷಣ, ಸಾರಿಗೆ ಹಾಗೂ ಆರೋಗ್ಯ ಎಂಬ ಹತ್ತು ವಲಯಗಳಲ್ಲಿ ಕ್ರಾಂತಿಕಾರಕ ಪ್ರಗತಿ ಆದಾಗ ಮಾತ್ರ ಭಾರತ ಅಭಿವೃದ್ಧಿ ಹೊಂದಿದ ದೇಶವಾಗಲು ಸಾಧ್ಯ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಬಿ.ಇ. ರಂಗಸ್ವಾಮಿ ತಿಳಿಸಿದರು.

ನಗರದ ಬಿ.ಐ.ಇ.ಟಿ. ಕಾಲೇಜಿನಲ್ಲಿ ಮೊನ್ನೆ ಆಯೋಜಿಸಲಾಗಿದ್ದ 41ನೇ ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಭಾರತದ ತಲಾ ವರಮಾನ ವರ್ಷಕ್ಕೆ 2,400 ಡಾಲರ್ ಆಗಿದ್ದು, ಮಧ್ಯಮ ಆದಾಯ ಮಟ್ಟದಲ್ಲಿದೆ. ಬಾಂಗ್ಲಾದೇಶ, ಶ್ರೀಲಂಕಾ ಹಾಗೂ ಪಾಕಿಸ್ತಾನಗಳೂ ಇದೇ ಮಟ್ಟದಲ್ಲಿವೆ.

ಈ ಹಂತದಿಂದ ಮೇಲೆದ್ದು ಅಭಿವೃದ್ಧಿ ಹೊಂದಿದ ದೇಶವಾಗಬೇಕಾದರೆ ತಲಾ ವರಮಾನ ಈಗಿನದಕ್ಕಿಂತ ಎಂಟು ಪಟ್ಟು ಹೆಚ್ಚಬೇಕಿದೆ ಎಂದು ಹೇಳಿದರು.

ವೇಗದ ಅಂತರ್ಜಾಲದಿಂದ ಹಿಡಿದು ಸರಕು ಸಾಗಣೆಯವರೆಗೆ, ಪೌಷ್ಟಿಕ ಆಹಾರದಿಂದ ತ್ವರಿತ ಸರಕು ಸಾಗಣೆಯವರೆಗೆ, ಹೈಡ್ರೋಜನ್ ಇಂಧನ ಬಳಕೆಯಿಂದ ರಕ್ಷಣಾ ಸ್ವಾವಲಂಬನೆಯವರೆಗೆ ಎಲ್ಲ ವಲಯಗಳಲ್ಲಿ ಕ್ರಾಂತಿಕಾರಕ ಬದಲಾವಣೆ ಆದಾಗ ಮಾತ್ರ ಭಾರತ 2047ರ ವೇಳೆಗೆ ಅಭಿವೃದ್ಧಿ ಹೊಂದಿದ ದೇಶವಾಗುವ ಕನಸು ನನಸಾಗಲು ಸಾಧ್ಯ ಎಂದು ರಂಗಸ್ವಾಮಿ ಹೇಳಿದರು.

ಈ ಎಲ್ಲ ಸಾಧನೆಗಳನ್ನು ಸಾಕಾರಗೊಳಿಸಲು ಇರುವ ಶಕ್ತಿ ಸೂತ್ರ ಎಂದರೆ ಶಿಕ್ಷಣ ಮಾತ್ರ. ಪದವಿ ಶಿಕ್ಷಣದ ಅಂತ್ಯವಲ್ಲ, ಅದು ಆರಂಭ ಮಾತ್ರ. ನಿರಂತರ ಕಲಿಕೆಯೇ ನಿಜವಾದ ಶಿಕ್ಷಣ. ಅಂತಹ ಶಿಕ್ಷಣದಿಂದ ಭಾರತದ ಬೆಳವಣಿಗೆಗೆ ಅಗತ್ಯವಾದ ತಂತ್ರಜ್ಞಾನ ಒದಗಿಸಿ ಎಂದವರು ಇಂಜಿನಿಯರಿಂಗ್ ಪದವೀಧರರಿಗೆ ಕರೆ ನೀಡಿದರು.

ಭಾರತ ಈಗ ಅಗತ್ಯವಾದ ಇಂಧನದಲ್ಲಿ ಶೇ.85ರಷ್ಟನ್ನು ಹಾಗೂ ಖಾದ್ಯ ತೈಲದಲ್ಲಿ ಶೇ.60ರಷ್ಟನ್ನು ಆಮದು ಮಾಡಿಕೊಳ್ಳುತ್ತಿದೆ. ರಕ್ಷಣಾ ವಲಯದಲ್ಲೂ ಆಮದು ಅವಲಂಬನೆ ಹೆಚ್ಚಾಗಿದೆ. ಕೌಶಲ್ಯದ ಕೊರತೆ ಇದೆ. ಈ ಎಲ್ಲ ಸಮಸ್ಯೆಗಳನ್ನು ತಂತ್ರಜ್ಞಾನದ ಮೂಲಕ ನೀಗಿಸಿಕೊಳ್ಳಬೇಕಿದೆ ಎಂದವರು ಹೇಳಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಲೇಖಕ ಹಾಗೂ ಶಿಕ್ಷಣ ತಜ್ಞ ಪಿ.ಬಿ. ಕೋಟೂರ, ಡಿಜಿಟಲ್ ತಂತ್ರಜ್ಞಾನದಲ್ಲಿ ಭಾರತ ಕ್ರಾಂತಿಯನ್ನೇ ಕಂಡಿದೆ. ಒಂದೇ ತಿಂಗಳಲ್ಲಿ ಭಾರತದಲ್ಲಿ 10 ಶತಕೋಟಿ ವಹಿವಾಟುಗಳು ನಡೆದಿವೆ. ಇದು ಅಭಿವೃದ್ಧಿ ಹೊಂದಿದ ಮೊದಲ ನಾಲ್ಕು ದೇಶಗಳ ಒಂದು ವರ್ಷದ ವಹಿವಾಟಿಗೆ ಸಮ ಎಂದು ಹೇಳಿದರು.

**ಕಾರ್ಪೊರೇಟ್ ವಲಯಕ್ಕೆ ಬೇಕು ಭಕ್ತಿ, ಯುಕ್ತಿ , ಶಕ್ತಿ**

ಕಾಲೇಜಿನ ಕ್ಯಾಂಪಸ್‌ಗಳಿಂದ ಕಾರ್ಪೊರೇಟ್ ವಲಯಕ್ಕೆ ಬರುವವರು ವಿಶ್ಲೇಷಣಾತ್ಮಕ ಚಿಂತನೆ, ಭಾವನಾತ್ಮಕ ಬುದ್ಧಿವಂತಿಕೆ ಹಾಗೂ ಕಾಯಕವೇ ಕೈಲಾಸ ಎಂಬ ಭಾವನೆ ಹೊಂದಿರಬೇಕು ಎಂದು ಶಿಕ್ಷಣ ತಜ್ಞ ಪಿ.ಬಿ. ಕೋಟೂರ ಹೇಳಿದರು.

ಈ ಮೂರು ಗುಣಗಳನ್ನು ಭಕ್ತಿ, ಯುಕ್ತಿ ಹಾಗೂ ಶಕ್ತಿ ಎಂಬ ಸೂತ್ರಕ್ಕೆ ಹೋಲಿಸಬಹುದು. ಈ ಮೂರೂ ಸೇರಿದಾಗ ಕಾರ್ಪೊರೇಟ್ ವಲಯದಲ್ಲಿ ಯಶಸ್ಸು ಸಿಗುತ್ತದೆ ಎಂದರು.

ಈ ಸಂದರ್ಭದಲ್ಲಿ ರ್‍ಯಾಂಕ್ ವಿಜೇತರು, ಬಂಗಾರದ ಪದಕ ವಿಜೇತರು ಹಾಗೂ ಪ್ರಥಮ ಸ್ಥಾನ ಪಡೆದವರನ್ನು ಸನ್ಮಾನಿಸಲಾಯಿತು.

ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ಪದವೀಧರರಿಗೆ ಪ್ರಮಾಣ ವಚನ ಬೋಧಿಸಿದರು.

ಎಸ್.ಬಿ. ಮಲ್ಲಿಕಾರ್ಜುನ ಸ್ವಾಗತಿಸಿದರು. ಎಂ. ವರ್ಷ ಹಾಗೂ ಎಸ್. ಪಿ. ಪುನೀತ್ ನಿರೂಪಿಸಿದರು.

# ಕಲಿಕೆಯನ್ನು ನಿಲ್ಲಿಸದೇ ಮುಂದುವರೆಸಬೇಕು



**ದಾವಣಗೆರೆ ವಿ.ವಿ ಕುಲಪತಿ ಡಾ. ಬಿ. ಡಿ. ಕುಂಬಾರ್ ಕರೆ**

ದಾವಣಗೆರೆ, ಅ. 24 - ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನಲ್ಲಿ ಗ್ರ್ಯಾಜುಯೇಷನ್ ಡೇ ಸಮಾರಂಭವನ್ನು ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಡಾ. ಬಿ. ಡಿ. ಕುಂಬಾರ್ ಅವರು 2023ರ ಬ್ಯಾಚ್ ಅನ್ನು ಉದ್ದೇಶಿಸಿ ಪಾಲಕರು ಮತ್ತು ಅಧ್ಯಾಪಕರನ್ನು ಅಭಿನಂದಿಸಿ, ಕಲಿಕೆಯನ್ನು ನಿಲ್ಲಿಸಬೇಡಿ, ಕಲಿಯುವುದನ್ನು ಮುಂದುವರೆಸಿ ಮತ್ತು ಕೆಲಸ ಮಾಡುವ ಮನೋಭಾವ ಮತ್ತು ಕೌಶಲ್ಯವನ್ನು ಬೆಳೆಸಿಕೊಳ್ಳಿ ಎಂದು ಹೇಳಿದರು. ಉದ್ಯಮ ಕ್ಷೇತ್ರದ ಅವಕಾಶಗಳು ಮತ್ತು ಅದರ ಸದ್ಬಳಕೆ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಮತ್ತೊರ್ವ ಮುಖ್ಯ ಅತಿಥಿಯಾಗಿದ್ದ ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದ ಕುಲಸಚಿವ ಡಾ. ಬಿ. ಇ. ರಂಗಸ್ವಾಮಿ ಮಾತನಾಡಿ, ಮುಂದಿನ ವರ್ಷಗಳಲ್ಲಿ 4ಡಿ ತಂತ್ರಜ್ಞಾನ ಪ್ರಂಪಚದಲ್ಲಿ ಆಕ್ರಮಿಸುತ್ತದೆ ಎಂದರು. ಭಾರತದ ಆರ್ಥಿಕತೆಯ ಬೆಳವಣಿಗೆ ಬಗ್ಗೆ ಮಾತನಾಡಿದ ಅವರು, 2047 ರಲ್ಲಿ ಭಾರತವು ಜಾಗತಿಕ ಆರ್ಥಿಕ ಶಕ್ತಿಯಾಗಿ ಬೆಳೆಯುತ್ತದೆ ಎಂದು ವಿವರಿಸಿದರು. ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ಮಾತಿನಲ್ಲಿ ಸತ್ಯವಿರಬೇಕು, ಸತ್ಯ ಪಾರದರ್ಶಕವಾಗಿರಬೇಕು ಎಂದು ತಿಳಿಸಿದರು.

ಜೆಐಟಿಯ ಅಧ್ಯಕ್ಷ ಅಚಲ್‌ಚಂದ್ ಜೈನ್, ಕಾಲೇಜಿನ ಪ್ರಾಂಶುಪಾಲ ಡಾ. ಡಿ.ಬಿ. ಗಣೇಶ್, ಜೈನ್ ಸಮೂಹದ ಸಲಹೆಗಾರರಾದ ಡಾ. ಮಂಜಪ್ಪ ಸಾರಥಿ, ಡೀನ್ ಆಕಾಡೆಮಿಕ್ಸ್ ಡಾ. ಎನ್. ಮಧುಕೇಶ್ವರ, ಕಾರ್ಯಕ್ರಮದ ಸಂಚಾಲಕ ಡಾ. ರಾಹುಲ್ ಪಾಟೀಲ್, ಸಂಯೋಜಕರಾದ ಭರತ್ ಎಚ್. ಎಂ ಮತ್ತು ಕೆ. ಎಸ್. ಹರೀಶ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಆಯ್ಕೆ ಸಮಿತಿಗೆ ಕಸಾಪ : ವಾಮದೇವಪ್ಪ ಸ್ವಾಗತ



ದಾವಣಗೆರೆ, ಅ. 24 - ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡಲು ಕರ್ನಾಟಕ ಸರ್ಕಾರವು ಕರೆದಿರುವ ಉನ್ನತ ಮಟ್ಟದ ಆಯ್ಕೆ ಸಮಿತಿ ಸಭೆಗೆ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ ಅವರನ್ನು ಆಹ್ವಾನಿಸಿರುವ ಸರ್ಕಾರದ ನಿರ್ಧಾರವನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ವಾಮದೇವಪ್ಪ ಸ್ವಾಗತಿಸಿದ್ದಾರೆ. ಕಳೆದ ಎರಡು ವರ್ಷಗಳಿಂದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರ ಆಯ್ಕೆ ಸಮಿತಿಯಿಂದ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನು ಹೊರಗಿಡಲಾಗಿತ್ತು. ಇದನ್ನು ಬಿ. ವಾಮದೇವಪ್ಪ ತೀವ್ರವಾಗಿ ವಿರೋಧಿಸಿದ್ದರು. 108 ವರ್ಷಗಳ ಇತಿಹಾಸವಿರುವ ಮತ್ತು ಸರ್ವ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನು ಆಯ್ಕೆ ಸಮಿತಿಯಲ್ಲಿ ಸೇರಿಸಬೇಕು ಎಂದು ಸರ್ಕಾರವನ್ನು ಆಗ್ರಹಿಸಿದ್ದರು. ಜೊತೆಗೆ ಈ ಶಿಷ್ಟಾಚಾರವು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲೂ ಅನುಸರಿಸಬೇಕೆಂದು ವಾಮದೇವಪ್ಪ ಅವರು ಪ್ರತಿಪಾದಿಸಿದ್ದರು.

## ನಗರದಲ್ಲಿ ಇಂದು ಅನ್ನ ಸಂತರ್ಪಣೆ

ಯಲ್ಲಮ್ಮ ನಗರ 4ನೇ ಮುಖ್ಯರಸ್ತೆ, 7ನೇ ಕ್ರಾಸ್‌ನಲ್ಲಿರುವ ಶ್ರೀ ಬನ್ನಿಮಹಾಂಕಾಳಿ ದೇವಸ್ಥಾನ ದಲ್ಲಿ ದಸರಾ ಮಹೋತ್ಸವದ ಅಂಗವಾಗಿ ಇಂದು ಮಧ್ಯಾಹ್ನ 12.30 ಗಂಟೆಗೆ ಅನ್ನ ಸಂತರ್ಪಣೆ ನಡೆಯಲಿದೆ ಎಂದು ಕಮಿಟಿ ಅಧ್ಯಕ್ಷ ಧರ್ಮರಾಜ್ ತಿಳಿಸಿದ್ದಾರೆ.

# ಹರಿಹರದಲ್ಲಿ ದಸರಾ ಸಂಭ್ರಮ : ಸಾಮೂಹಿಕ ಬನ್ನಿ



ಹರಿಹರ, ಅ, 24- ನಗರದಲ್ಲಿ ದಸರಾ ಮಹೋತ್ಸವದ ಸಾಮೂಹಿಕ ಬನ್ನಿ ಮುಡಿಯವ ಕಾರ್ಯಕ್ರಮವನ್ನು ಸಡಗರ, ಸಂಭ್ರಮ ಹಾಗೂ ಶ್ರದ್ಧಾ ಭಕ್ತಿಯಿಂದ, ಅದ್ದೂರಿಯಾಗಿ ಆಚರಿಸಲಾಯಿತು.

ಶ್ರೀ ಹರಿಹರೇಶ್ವರ ದೇವಾಲಯದ ಮುಂಭಾಗದಲ್ಲಿ ದುರ್ಗಾದೇವಿ ಮೂರ್ತಿಯನ್ನು ಹೊತ್ತ ಆನೆಗೆ ಕಾಲಜ್ಞಾನಿ ಮಠದ ಶ್ರೀ ಸಿದ್ದಲಿಂಗೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿ, ಸಂಸದ ಜಿ.ಎಂ. ಸಿದ್ದೇಶ್ವರ, ಸಹೋದರ ಲಿಂಗರಾಜ್, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್, ಎಸ್. ರಾಮಪ್ಪ, ನಗರಸಭೆ ಅಧ್ಯಕ್ಷರಾದ ನಿಂಬಕ್ಕ ಚಂದಾಪೂರ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಜಿ.ಬಿ. ವಿನಯಕುಮಾರ್, ಉತ್ಸವ ಸಮಿತಿಯ ಅಧ್ಯಕ್ಷ ಶಂಕರ್ ಖಟಾವ್ಕರ್ ಸೇರಿದಂತೆ ಅನೇಕ ಗಣ್ಯಮಾನ್ಯರು ಆನೆಗೆ ಪುಷ್ಪವನ್ನು ಹಾಕುವ ಮೂಲಕ ದಸರಾ ಮಹೋತ್ಸವದ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆಯಲ್ಲಿ ಶ್ರೀ ಹರಿಹರೇಶ್ವರ ಸ್ವಾಮಿ, ಗ್ರಾಮದೇವತೆ ಊರಮ್ಮ ಸೇರಿದಂತೆ, ನಗರದ ಸುಮಾರು 50 ಕ್ಕೂ ಹೆಚ್ಚು ದೇವರುಗಳ ಪಲ್ಲಕ್ಕಿ ಉತ್ಸವ ಮೂರ್ತಿಗಳು ಪಾಲ್ಗೊಂಡಿದ್ದವು.

ಮೆರವಣಿಗೆ ಶ್ರೀ ಹರಿಹರೇಶ್ವರ ದೇವಾಲಯದ ಮುಂಭಾಗದಿಂದ ಆರಂಭಗೊಂಡು ದೇವಸ್ಥಾನ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಮುಖ್ಯರಸ್ತೆ, ಹಳೆ ಪಿ.ಬಿ. ರಸ್ತೆ, ಮುಖಾಂತರ ಸಂಚರಿಸಿ ಸಂಜೆ ಜೋಡು ಬಸವೇಶ್ವರ ದೇವಾಲಯದ ಆವರಣದಲ್ಲಿರುವ ಶ್ರೀ ಬನ್ನಿ ಮಹಾಂಕಾಳಿ ಮಂಟಪಕ್ಕೆ ಅಂತ್ಯಗೊಂಡಿತು.

ಬನ್ನಿ ಮಹಾಂಕಾಳಿ ದೇವತೆಗೆ ಪಂಡಿತ ನಾರಾಯಣ ಜೋಯಿಸರು, ಚಿದಂಬರ ಜೋಯಿಸರು, ಹರಿಶಂಕರ್ ಜೋಯಿಸರ ನೇತೃತ್ವದಲ್ಲಿ, ತಹಶೀಲ್ದಾರ್ ಪೃಥ್ವಿ ಸಾನಿಕಂ ಮತ್ತು ಶಾಸಕ ಬಿ.ಪಿ. ಹರೀಶ್ ಅವರು ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ಬನ್ನಿ ಮುಡಿಯುವ ಕಾರ್ಯಕ್ಕೆ ಚಾಲನೆ ನೀಡಿದರು.

ಮೆರವಣಿಗೆಯಲ್ಲಿ ರಾಜ್ಯದ ಪ್ರಖ್ಯಾತ ಕಲಾ ತಂಡಗಳಾದ ಹುಬ್ಬಳ್ಳಿ ಜಕ್ಕಲಿಗೆ, ಕೀಲು ಕುದುರೆ, ಡೊಳ್ಳು, ಸಮ್ಮಾಳ, ನಂದಿಕೋಲು, ವೀರಗಾಸೆ, ಮರಗಾಲು, ಜಾಂಜ್ ಪತ್, ನಾದಸ್ವರ, ತಮಟೆ, ಕೋಲಾಟ, ಸ್ತಬ್ದ ಚಿತ್ರಗಳು, ಸಾರೋಟ್ ಆನೆ ಅಂಬಾರಿ, ಎತ್ತಿನ ಬೆಲ್ಲದ ಬಂಡಿ ಸೇರಿದಂತೆ ಅನೇಕ ಕಲಾ ತಂಡಗಳು ಭಾಗವಹಿಸಿ ಮೆರವಣಿಗೆಗೆ ಮೆರಗನ್ನು ನೀಡಿದವು. ಗಾಂಧಿ ವೃತ್ತದಲ್ಲಿ ಪೊಲೀಸ್ ಇಲಾಖೆ ವತಿಯಿಂದ ದುರ್ಗಾದೇವಿ ಮೂರ್ತಿಗೆ ಪುಷ್ಪಾರ್ಚನೆ ಮಾಡಲಾಯಿತು.

ಈ ವೇಳೆ ಕಾಲಜ್ಞಾನಿ ಸಿದ್ದಲಿಂಗಸ್ವಾಮಿ ಮಾತನಾಡಿ, ನಾಡಿನಾದ್ಯಂತ ಮಳೆ ಬೀಳದೆ ರೈತರ ಬದುಕು ದುಸ್ತರವಾಗಿದ್ದು, ನಾಡದೇವತೆ ಚಾಮುಂಡೇಶ್ವರಿ ಮತ್ತು ದುರ್ಗಾದೇವಿ ಆಶೀರ್ವಾದ ರೂಪದಲ್ಲಿ ಮಳೆ ಚೆನ್ನಾಗಿ ಬರುವ ಮೂಲಕ ಬೆಳೆಗಳು ಚೆನ್ನಾಗಿ ನಾಡಿನ ಜನರ ಬದುಕು ಹಸನಾಗುವಂತಾಗಲಿ ಎಂದು ಹೇಳಿದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಹರಿಹರೇಶ್ವರ ಸ್ವಾಮಿ, ಊರಮ್ಮ ದೇವಿಯ ಆಶೀರ್ವಾದದಿಂದ ಮಳೆ ಬೀಳುವ ಮೂಲಕ ರೈತರ ಆರ್ಥಿಕ ವ್ಯವಸ್ಥೆ ಸುಧಾರಣೆ ಆಗುವಂತಾಗಲಿ ಎಂದು ಹೇಳಿದರು.

## ಬೆಳವನೂರಿನಲ್ಲಿನ ಇಂದಿನ ಜನತಾ ದರ್ಶನಕ್ಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್

ದಾವಣಗೆರೆ ತಾಲ್ಲೂಕಿನ ಬೆಳವನೂರು ಗ್ರಾಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಅಧ್ಯಕ್ಷತೆಯಲ್ಲಿ ಇಂದು ಜಿಲ್ಲಾ ಮಟ್ಟದ ಜನತಾ ದರ್ಶನ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ತಿಳಿಸಿದ್ದಾರೆ.

ಈ ಜನತಾ ದರ್ಶನ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಕುಂದು-ಕೊರತೆಗಳನ್ನು ಸ್ವೀಕರಿಸಿ ಸ್ಥಳದಲ್ಲಿಯೇ ಪರಿಹಾರ ಕಂಡುಕೊಳ್ಳಲಾಗುತ್ತದೆ. ಜನತಾ ದರ್ಶನ ಕಾರ್ಯಕ್ರಮದಲ್ಲಿ ಸ್ವೀಕೃತವಾದ ಎಲ್ಲಾ ಅರ್ಜಿಗಳನ್ನು ಸಾರ್ವಜನಿಕ ಕುಂದುಕೊರತೆಯ ನಿವಾರಣೆ ವ್ಯವಸ್ಥೆಯ ತಂತ್ರಾಂಶದಲ್ಲಿ ದಾಖಲಿಸಲಾಗುತ್ತದೆ. ಇದಕ್ಕಾಗಿ ಕುಂದುಕೊರತೆಗಳನ್ನು ದಾಖಲಿಸಲು ಇಲಾಖಾವಾರು ಪ್ರತ್ಯೇಕ ಕೌಂಟರ್‌ಗಳನ್ನು ತೆರೆಯಲಾಗುತ್ತದೆ.

# ಸ್ವಾರ್ಥಕ್ಕಿಂತ ಸ್ವಸ್ಥ ಸಮಾಜ ನಿರ್ಮಾಣ ಲೇಸು



ದಾವಣಗೆರೆ, ಅ. 24- ಪ್ರಸ್ತುತ ಸ್ವಾರ್ಥ ಸಮಾಜಕ್ಕಿಂತ ಸ್ವಾಸ್ಥ್ಯ ಸಮಾಜ ನಿರ್ಮಾಣ ಲೇಸು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರೇ ಪ್ರಭುಗಳಾಗಿರಬೇಕು ಎಂದು ಇನ್‌ಸೈಟ್ಸ್ ಐಎಎಸ್ ಸಂಸ್ಥೆ ಸಂಸ್ಥಾಪಕ ಜಿ.ಬಿ. ವಿನಯ್ ಕುಮಾರ್ ಅಭಿಪ್ರಾಯಪಟ್ಟರು. ನಗರದ ತಮ್ಮ ಜನಸಂಪರ್ಕ ಕಚೇರಿ ಆವರಣದಲ್ಲಿ ಅವರ ಅಭಿಮಾನಿ ಬಳಗದ ವತಿಯಿಂದ ಮೊನ್ನೆ ಆಯೋಜಿಸಿದ್ದ ವಿಕಲಚೇತನರಿಗೆ ವ್ಹೀಲ್ ಚೇರ್, ವಾಕರ್, ವಾಕಿಂಗ್ ಸ್ಟಿಕ್ ಹಾಗೂ ಶ್ರವಣ ಸಾಧನಗಳ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಜಕಾರಣಿಗಳು ಜನಸೇವಕರಾಗಿ ಇರಬೇಕೆಂಬ ಅರಿವು ಹೊಂದಬೇಕಾಗಿದೆ. ಶಿಕ್ಷಣದಿಂದ ಬದಲಾವಣೆ ತರಲು ಸಾಧ್ಯ. ಇಂದಿನ ಶಿಕ್ಷಣ ಪದ್ಧತಿ ಎಲ್ಲರನ್ನು ದಡ್ಡರನ್ನಾಗಿಸುತ್ತಿದೆ. ಹೊಸ ಆಲೋಚನೆಗಳಿರುವ ಶಿಕ್ಷಣದ ಅಗತ್ಯವಿದೆ ಎಂದರು.

ಜನರನ್ನು ವಂಚಿಸುವ ಮೂಲಕ ಅಧಿಕಾರ, ಸಂಪತ್ತು, ಅವಕಾಶಗಳನ್ನು ಪಡೆಯಬೇಕೆಂಬ ಮನೋಭಾವನೆ ಹೆಚ್ಚಾಗಿ ಕಂಡು ಬರುತ್ತಿದೆ. ರಾಜಕಾರಣಿಗಳಲ್ಲಿರುವ ಈ ಧೋರಣೆ ಬದಲಾಗಬೇಕಿದೆ ಎಂದು ಹೇಳಿದರು.

ಸಾಮಾಜಿಕ ಕಳಕಳಿ, ಸೇವಾ ಮನೋಭಾವನೆ, ಜನರ ಆಶೋತ್ತರಗಳಿಗೆ ಸ್ಪಂದಿಸುವ ಗುಣಗಳಿರುವ ಮತ್ತು ಜನರನ್ನು ಪ್ರೀತಿಯಿಂದ ಕಾಣುವ ರಾಜಕಾರಣಿಗಳ ಅಗತ್ಯತೆ ಇದೆ. ಇವುಗಳಿದ್ದಲ್ಲಿ ಜನರ ಕಷ್ಟಗಳಿಗೆ ನೆರವಾಗುವ ಮನೋಭಾವನೆ ಬರುತ್ತದೆ ಎಂದರು.

ಯರಗುಂಟೆ ಶ್ರೀ ಗುರು ಕರಿಬಸವೇಶ್ವರ ಸ್ವಾಮಿ ಗದ್ದುಗೆ ಮಠದ ಶ್ರೀ ಪರಮೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಇಂದಿನ ರಾಜಕೀಯ ಕ್ಷೇತ್ರ ಸಂವಿಧಾನದ ಆಶಯದಂತೆ ಸೇವಾ ಕ್ಷೇತ್ರವಾಗಿ ಉಳಿದಿಲ್ಲ ಎಂದರು.ರಾಜಕೀಯ ಕ್ಷೇತ್ರ ಸೇವಾ ಕ್ಷೇತ್ರವಾಗಿರದೇ ಅದೊಂದು ವ್ಯಾಪಾರೋದ್ಯಮವಾಗಿ ಬದಲಾಗಿದೆ. ಬಂಡವಾಳ ಹೂಡಿ ಬಂಡವಾಳ ಪಡೆಯಬೇಕೆಂಬ ಮನೋ ಧೋರಣೆ ಹೆಚ್ಚಾಗಿ ಕಂಡು ಬರುತ್ತಿದೆ ಎಂದು ಹೇಳಿದರು.

ಹದಡಿ- ಹೊಸಹಳ್ಳಿ ಚಂದ್ರಗಿರಿ ಮಠದ ಶ್ರೀ ಸದ್ಗುರು ಪರಮಹಂಸ ವಿದ್ಯಾವರೇಣ್ಯ ಮುರುಳೀಧರ ಸ್ವಾಮೀಜಿ ಅವರು ವಿನಯ್ ಅವರ ಸೇವಾ ಕಾರ್ಯಗಳ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು.

ಬಸವ ಕಲಾ ಲೋಕದ ಕಲಾವಿದ ಆದರ್ಶ ಪ್ರಾರ್ಥಿಸಿದರು. ಪತ್ರಕರ್ತ ಪುರಂದರ್ ಲೋಕಿಕೆರೆ ಸ್ವಾಗತಿಸಿದರು. ಸುಪ್ರಿತಾ ಒಡೆಯರ್ ನಿರೂಪಿಸಿದರು. ಇದೇ ವೇಳೆ ಗೌರವಿಸುವ ಮೂಲಕ 45 ಕ್ಕೂ ಹೆಚ್ಚು ವ್ಹೀಲ್ ಚೇರ್, 40 ಕ್ಕೂ ಹೆಚ್ಚು ವಾಕರ್ ಹಾಗೂ 80 ಕ್ಕೂ ಹೆಚ್ಚು ಶ್ರವಣ ಸಾಧನಗಳನ್ನು ವಿತರಣೆ ಮಾಡಲಾಯಿತು.

ಪತ್ರಕರ್ತ ಮಧುಕರ್, ಶಿವಣ್ಣ, ಶರತ್ ಕುಮಾರ್, ರವಿಕುಮಾರ ಸೇರಿದಂತೆ ವಿನಯ್ ಕುಮಾರ್ ಅಭಿಮಾನಿ ಬಳಗದ ಮುಖಂಡರು ಉಪಸ್ಥಿತರಿದ್ದರು.

## ಇಂದು ಹೈನುಗಾರಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ದಾವಣಗೆರೆಯ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ರೈತರಿಗೆ ಪಶುಸಂಗೋಪನಾ ಚಟುವಟಿಕೆಗಳ ಕುರಿತು ತರಬೇತಿ ಶಿಬಿರ ನಡೆಯಲಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದ ಪಶು ವೈದ್ಯಾಧಿಕಾರಿ ಗುರುಶಾಂತಪ್ಪ ಬಿ.ಜಿ ತಿಳಿಸಿದ್ದಾರೆ.

ಇಂದು ಮತ್ತು ನಾಳೆ ಆಧುನಿಕ ಹೈನುಗಾರಿಕೆ ತರಬೇತಿ ಹಾಗೂ ದಿನಾಂಕ 27, 28 ರಂದು ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ನೀಡಲಾಗುವುದು. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.


## ಮೆಟಾ ವಿರುದ್ಧ ಅಮೆರಿಕದ ರಾಜ್ಯಗಳ ಮೊಕದ್ದಮೆ

ವಾಷಿಂಗ್ಟನ್, ಅ. 24 – ಇನ್‌ಸ್ಟಾಗ್ರಾಂ ಹಾಗೂ ಫೇಸ್‌ಬುಕ್‌ಗಳ ಅಂಶಗಳನ್ನು ಉದ್ದೇಶಪೂರ್ವಕವಾಗಿ ಮಕ್ಕಳಿಗೆ ವ್ಯಸನವಾಗುವಂತೆ ರೂಪಿಸಲಾಗುತ್ತಿದೆ. ಇದರಿಂದ ಹದಿಹರೆಯದವರಲ್ಲಿ ಮಾನಸಿಕ ಆರೋಗ್ಯದ ಬಿಕ್ಕಟ್ಟು ಉಂಟಾಗಿದೆ ಎಂದು ಅಮೆರಿಕದ ಹತ್ತಾರು ರಾಜ್ಯಗಳು ಪ್ರಕರಣ ದಾಖಲಿಸಿವೆ. ಇನ್‌ಸ್ಟಾಗ್ರಾಂ ಹಾಗೂ ಫೇಸ್‌ಬುಕ್‌ಗಳ ಮಾತೃಸಂಸ್ಥೆಯಾದ ಮೆಟಾ ವಿರುದ್ಧ ಕ್ಯಾಲಿಫೋರ್ನಿಯಾ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿದೆ. ಪೋಷಕರ ಅನುಮತಿ ಇಲ್ಲದೇ 13 ವರ್ಷದೊಳಗಿನ ಮಕ್ಕಳ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಇದು ಕಾನೂನಿನ ಉಲ್ಲಂಘನೆ ಎಂದು ರಾಜ್ಯಗಳು ಹೇಳಿವೆ.

## ನಗರದಲ್ಲಿ ಇಂದಿನಿಂದ ವ್ಯಕ್ತಿತ್ವ ವಿಕಸನ ಶಿಬಿರ

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಪಿಯುಸಿ ವಿದ್ಯಾರ್ಥಿನಿಯರಿಗೆ ವ್ಯಕ್ತಿತ್ವ ವಿಕಸನ ಶಿಬಿರವು ಇಂದಿನಿಂದ 6 ದಿನಗಳ ಕಾಲ ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಶಿವ ಧ್ಯಾನ ಮಂದಿರದಲ್ಲಿ ನಡೆಯಲಿದೆ. ಶಿಬಿರದಲ್ಲಿ ಭಾಗವಹಿಸಲಿಚ್ಚಿಸುವ ವಿದ್ಯಾರ್ಥಿಗಳು ಮೊಬೈಲ್ ಸಂಖ್ಯೆ 94805-57070 ರಲ್ಲಿ ಸಂಪರ್ಕಿಸುವಂತೆ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಕೋರಿದ್ದಾರೆ.

## ಮೂರು ತಲೆಮಾರಿನ 'ಗಟ್ಟಿಂಗ್' ಪರಿಣಿತರು



ದಾವಣಗೆರೆ, ಅ. 24 – ಟೆನ್ನಿಸ್ ಬ್ಯಾಟ್‌ಗಳ ವೈರ್ ಹುರಿಗೊಳಿಸುವ 'ಗಟ್ಟಿಂಗ್' ಪರಿಣಿತ ಮೊಹಮ್ಮದ್ ರಿಯಾಸ್ ಅಹಮದ್ ಅವರು ಜಿಲ್ಲಾ ಟೆನ್ನಿಸ್ ಕಟ್ಟಡದಲ್ಲಿ ಆಟಗಾರರಿಗೆ ನೆರವಾಗುತ್ತಿದ್ದರು. ನನ್ನ ತಂದೆ ಮಹಬೂಬ್ ಸಾಬ್ 1939ರಲ್ಲಿ ಟೆನ್ನಿಸ್ ಹಾಗೂ ಬ್ಯಾಡ್ಮಿಂಟನ್ ಬ್ಯಾಟ್‌ಗಳಿಗೆ ಗಟ್ಟಿಂಗ್ ಮಾಡುತ್ತಿದ್ದರು. ನಾನು ಆ ವೃತ್ತಿಯಲ್ಲಿ ತೊಡಗಿದೆ. ಈಗ ನನ್ನ ಅಳಿಯ ಮೊಹಮ್ಮದ್ ಖಾನ್ ಸಹ ಇದೇ ವೃತ್ತಿಯಲ್ಲಿದ್ದಾರೆ ಎಂದು ರಿಯಾಸ್ ಅಹಮದ್ ತಿಳಿಸುತ್ತಾರೆ.

ಬಳ್ಳಾರಿ ಮೂಲದ ಪ್ರಸಕ್ತ ಹೈದರಾಬಾದ್‌ನಲ್ಲಿರುವ ಅಹಮದ್, ಅಂತರರಾಷ್ಟ್ರೀಯ ಪಂದ್ಯಾವಳಿ ನಡೆಯುವ ಸ್ಥಳಗಳಿಗೆ ತೆರಳಿ ರಾಕೆಟ್‌ಗಳಿಗೆ ಗಟ್ಟಿಂಗ್ ಹಾಕಿ ಕೊಡುತ್ತಾರೆ. ಈ ಹಿಂದೆ ಕೈಗಳಿಂದ ಗಟ್ಟಿಂಗ್ ಕೆಲಸ ನಡೆಯುತ್ತಿತ್ತು. ಈಗ ಯಂತ್ರ ಬಂದಿದೆ. ಮೊದಲು ಅರ್ಧ ಗಂಟೆಯಲ್ಲಿ ಆಗುತ್ತಿದ್ದ ಕೆಲಸ, ಈಗ 15 ನಿಮಿಷಗಳಲ್ಲಿ ಮುಗಿಯುತ್ತಿದೆ. ತಂತಿಗಳ ಹುರಿಗಟ್ಟುವಿಕೆ ಅತ್ಯಂತ ನಿಖರವಾಗಿರುತ್ತದೆ ಎಂದು ಅಳಿಯ ಮೊಹಮ್ಮದ್ ಖಾನ್ ತಿಳಿಸಿದ್ದಾರೆ.

# ಬನ್ನಿ ಪೂಜೆ; ಪೌರ ಕಾರ್ಮಿಕರಿಗೆ ಉಡುಗೊರೆ ವಿತರಣೆ

ದಾವಣಗೆರೆ, ಅ.24- ನಗರದ ಎಂಸಿಸಿ ಬಿ ಬ್ಲಾಕ್‌ನ ಎರಡನೇ ಮುಖ್ಯ ರಸ್ತೆಯ ಮೂರನೇ ತಿರುವಿನಲ್ಲಿ ನವರಾತ್ರಿ ಹಾಗೂ ದಸರಾ ಹಬ್ಬದ ಪ್ರಯುಕ್ತ ಬನ್ನಿ ಪೂಜೆ ನೆರವೇರಿಸಿ, ಪೌರ ಕಾರ್ಮಿಕರಿಗೆ ಉಡುಗೊರೆ ವಿತರಣೆ ಮಾಡಲಾಯಿತು.

ಈ ವೇಳೆ ಮಾತನಾಡಿದ ಮಹಾನಗರ ಪಾಲಿಕೆಯ ಈ ಭಾಗದ ಸದಸ್ಯ ಗಡಿಗುಡಾಳ್ ಮಂಜುನಾಥ್, ನಗರವು ಸ್ವಚ್ಛವಾಗಿರಬೇಕಾದರೆ ಪೌರ ಕಾರ್ಮಿಕರ ಸೇವೆ ಅಗತ್ಯ. ಇಂಥ ಕಾಯಕ ಮಾಡುವವರಿಗೆ ನಮ್ಮ ಕೈಲಾದಷ್ಟು ನೆರವು ನೀಡುವ ಸಲುವಾಗಿ ಪ್ರತಿ ವರ್ಷದಂತೆ ಈ ವರ್ಷವೂ ಸಹ ಪೌರ ಕಾರ್ಮಿಕರಿಗೆ ಉಡುಗೊರೆ ನೀಡಲಾಗುತ್ತಿದೆ ಎಂದರು.

ಪೌರ ಕಾರ್ಮಿಕರಿಗೂ ಹಬ್ಬದ ಶುಭಾಶಯದ ಜೊತೆಗೆ ಅವರೊಟ್ಟಿಗೆ ದಸರಾ ಆಚರಿಸುವುದು ಖುಷಿಯ ವಿಚಾರ. ಸ್ವಚ್ಛತೆಯಿಂದ ಹಿಡಿದು ಪ್ರತಿಯೊಂದು ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಅವರ ಕುಟುಂಬವೂ ಹಬ್ಬವನ್ನು ಸಡಗರ, ಸಂಭ್ರಮದಿಂದ ಆಚರಿಸಲಿ ಎಂದು ಹೇಳಿದರು.

ಉಡುಗೊರೆ ಸ್ವೀಕರಿಸಿ ಮಾತನಾಡಿದ ಪೌರ ಕಾರ್ಮಿಕರು, ಪ್ರತಿವರ್ಷವೂ ನಮ್ಮನ್ನು ಇಲ್ಲಿಗೆ ಆಹ್ವಾನಿಸಿ ಕೊಡುಗೆ ನೀಡುವ ಕಾರ್ಯಕ್ರಮ ನಮಗೆಲ್ಲರಿಗೂ ಖುಷಿ ಕೊಡುತ್ತದೆ. ನಮ್ಮ ಕೆಲಸವನ್ನು ಗುರುತಿಸಿ ಪ್ರಶಂಸೆಯ ಮಾತುಗಳನ್ನು ಕೇಳುವುದು ಸಂತಸ ಕೊಡುತ್ತದೆ. ನಾವು ಚಿರಋಣಿಯಾಗಿರುತ್ತೇವೆ ಎಂದರು.



ನವರಾತ್ರಿ ಹಾಗೂ ದಸರಾ ಹಬ್ಬದ ಪ್ರಯುಕ್ತ ಪೌರ ಕಾರ್ಮಿಕರಿಗೆ ಮಹಾನಗರ ಪಾಲಿಕೆಯ ಈ ಭಾಗದ ಸದಸ್ಯ ಗಡಿಗುಡಾಳ್ ಮಂಜುನಾಥ್ ಉಡುಗೊರೆ ವಿತರಣೆ ಮಾಡಿದರು.

# ವಿಜಯದಶಮಿ: ನಗರದಲ್ಲಿ ಸಂಭ್ರಮದ ಶೋಭಾಯಾತ್ರೆ







ದಾವಣಗೆರೆ, ಅ.24- ನಾಡಹಬ್ಬ ದಸರಾ ಅಂಗವಾಗಿ ವಿಶ್ವ ಹಿಂದೂ ಪರಿಷದ್, ಸಾರ್ವಜನಿಕ ವಿಜಯದಶಮಿ ಮಹೋತ್ಸವ ಸಮಿತಿ ಆಶ್ರಯದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಶೋಭಾಯಾತ್ರೆ ವಿಜೃಂಭಣೆಯಿಂದ ನೆರವೇರಿತು.

ಬೇತೂರು ರಸ್ತೆಯ ವೆಂಕಟೇಶ್ವರ ವೃತ್ತದಲ್ಲಿ ಮಧ್ಯಾಹ್ನ 11.30 ರ ಸುಮಾರಿಗೆ ದುರ್ಗಾದೇವಿ ಮೂರ್ತಿಗೆ ವಿನೋಬ ನಗರದ ಶ್ರೀ ಜಡೇಸಿದ್ಧ ಶಿವಯೋಗೀಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಶೋಭಾಯಾತ್ರೆಗೆ ಚಾಲನೆ ನೀಡಿದರು.

ನಂತರ ಬೃಹತ್ ಶೋಭಾಯಾತ್ರೆ ಚೌಕಿಪೇಟೆ, ಹೊಂಡದ ವೃತ್ತ, ಅರುಣಾ ಚಿತ್ರಮಂದಿರ ವೃತ್ತದ ಮೂಲಕ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಮೈದಾನ ತಲುಪುವಷ್ಟರಲ್ಲಿ ಸಂಜೆ 7 ಗಂಟೆಯಾಗಿತ್ತು.

ಭಾರತ ಮಾತೆ, ಶ್ರೀ ಚಾಮುಂಡೇಶ್ವರಿ, ಶ್ರೀ ದುರ್ಗಾಂಬಿಕಾದೇವಿ, ವಿವೇಕಾನಂದ, ಛತ್ರಪತಿ ಶಿವಾಜಿ ಇತರರ ಭಾವಚಿತ್ರ, ಸ್ತಬ್ಧ ಚಿತ್ರಗಳು, ನಂದಿಕೋಲು, ಡೊಳ್ಳು, ಸಮಾಳ, ದೇಶಿ ಡೊಳ್ಳು, ನಾಸಿಕ್ ಡೋಲು, ಚಂಡೇ ನಾದ, ನಾದಸ್ವರ, ಕೀಲು ಕುದುರೆ, ಸೇರಿದಂತೆ ಇತರೆ ಜಾನಪದ ಕಲಾತಂಡಗಳು ಮೆರವಣಿಗೆಯ ಮೆರಗು ಹೆಚ್ಚಿಸಿದವು.

'ಶೋಭಾಯಾತ್ರೆ ನೋಡಲು ರಸ್ತೆಯ ಇಕ್ಕೆಲಗಳಲ್ಲಿ ಸಾವಿರಾರು ಜನರು ನೆರೆದಿದ್ದರು. ಶೋಭಾಯಾತ್ರೆ ಹಿನ್ನೆಲೆಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಚಂದ್ರಯಾನ-3, ಸಿದ್ದಗಂಗಾ ಸ್ವಾಮೀಜಿ, ಬಾಲಗಂಗಾಧರನಾಥ ಸ್ವಾಮೀಜಿ, ಸಿದ್ದೇಶ್ವರ ಸ್ವಾಮೀಜಿ, ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಕೊರಗಜ್ಜ, ಕನಕದಾಸ, ದತ್ತಾತ್ರೇಯ ಸ್ವಾಮಿ, ವಾಲ್ಮೀಕಿ, ವೀರಮದಕರಿ ನಾಯಕ, ಸುಭಾಷ್‌ಚಂದ್ರ ಭೋಸ್, ಬಸವಣ್ಣ, ಅಕ್ಕಮಹಾದೇವಿ, ಪರಶುರಾಮ, ಕಾಮಧೇನು, ಸ್ವಾತಂತ್ರ್ಯಕ್ಕೆ ಹೋರಾಡಿದ ಮಹನೀಯರು, ಹಿಂದೂ ಪರ ಹೋರಾಟಗಾರರ ಸ್ತಬ್ಧ ಚಿತ್ರಗಳು ಮೆರವಣಿಗೆಯಲ್ಲಿದ್ದವು.



ಶೋಭಾಯಾತ್ರೆಯಲ್ಲಿ ಗಮನ ಸೆಳದ ಆಂಜನೇಯ ವೇಷಧಾರಿ ಬಾಲಕ

ಎಂದಿನಂತ ಶೋಭಾಯಾತ್ರೆಯಲ್ಲಿ ಡಿಜೆ ಸದ್ದೇ ಜೋರಾಗಿತ್ತು. ಡಿಜೆಯಲ್ಲಿನ ಹಾಡುಗಳಿಗೆ ಯುವಕರು ಬಿಸಿಲನ್ನೂ ಲೆಕ್ಕಿಸದೆ ಕುಣಿದು ಕಪ್ಪಳಿಸಿದರು. ಯಾತ್ರೆ ಬರುವ ಮಾರ್ಗದಲ್ಲಿ ಸಂಘ, ಸಂಸ್ಥೆಗಳು, ಯುವಕರು, ಪಾನಕ, ನೀರು, ಮಜ್ಜಿಗೆ ವಿತರಣೆ ಮಾಡುತ್ತಿದ್ದರು.

ಶೋಭಾಯಾತ್ರೆ ಉದ್ದಕ್ಕೂ ಪೊಲೀಸರು ವಿಶೇಷ ಬಂದೋಬಸ್ತ್ ಮಾಡಿದ್ದರು. ಯಾತ್ರೆ ಸಾಗುವ ದಾರಿ ಸೇರಿದಂತೆ ವಿವಿಧ ಸೂಕ್ಷ್ಮ ಹಾಗೂ ಅತೀಸೂಕ್ಷ್ಮ ಪ್ರದೇಶಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸಲಾಗಿತ್ತು. ಯಾತ್ರೆ ಆಗಮಿಸುವ ವೇಳೆ ರಸ್ತೆ ಬಂದ್ ಮಾಡಲಾಗಿತ್ತು. ಅಲ್ಲಲ್ಲಿ ಬ್ಯಾರಿಕೇಡ್‌ಗಳನ್ನು ಹಾಕುವ ಮೂಲಕ ಬೈಕ್, ಕಾರು ಸೇರಿದಂತೆ ವಾಹನಗಳ ಓಡಾಟಕ್ಕೆ ಕಡಿವಾಣ ಹಾಕಿದ್ದರು.

ಮಾಜಿ ಸಚಿವ ಎಸ್.ಎ.ರವೀಂದ್ರನಾಥ್, ಬಿಜೆಪಿ ಮುಖಂಡರಾದ ಡಾ.ಎ.ಹೆಚ್.ಶಿವಯೋಗಿಸ್ವಾಮಿ, ವೈ. ಮಲ್ಲೇಶ್, ಯಶವಂತರಾವ್ ಜಾಧವ್, ಎಸ್.ಟಿ. ವೀರೇಶ್, ಬಿ.ಜಿ. ಅಜಯ ಕುಮಾರ್, ಲೋಕಿಕೆರೆ ನಾಗರಾಜ್, ಎನ್. ರಾಜಶೇಖರ್, ರಾಜನಹಳ್ಳಿ ಶಿವಕುಮಾರ್, ಡಾ.ಟಿ.ಜಿ.ರವಿಕುಮಾರ್, ಶಾಂತರಾಜ ಪಾಟೀಲ್, ಕೆ.ಎಂ.ಸುರೇಶ್, ಶ್ರೀನಿವಾಸ ದಾಸಕರಿಯಪ್ಪ, ರಾಕೇಶ್, ಧನುಷ್ ರೆಡ್ಡಿ, ವಿಶ್ವಾಸ್, ಸೇರಿದಂತೆ ಅನೇಕರು ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಸಹ ಆಗಮಿಸಿ ದೇವಿ ಮೂರ್ತಿಗೆ ಪೂಜೆ ಸಲ್ಲಿಸಿದರು.

ಶೋಭಾಯಾತ್ರೆಯಲ್ಲಿ ತಂಜುಮನ್ ಮುಸ್ಲಿಮಿನ್ ಫಂಡ್ ಅಸೋಸಿಯೇಷನ್ ಅಧ್ಯಕ್ಷ ದಾದೂ ಸೇಠ್ ನೇತೃತ್ವದಲ್ಲಿ ಮುಖಂಡರಾದ ಚಮನ್‌ಸಾಬ್, ಸನಾವುಲ್ಲಾ, ಜಬೀವುಲ್ಲಾ, ಖಾದೀರ್, ಮಹಮ್ಮದ್ ಶಫೀಕ್, ಶೇಖ್ ದಾದೂ, ಅಮ್ಜದ್, ಶಂಶುದ್ದೀನ್ ರಜ್ವಿ, ಮಹಮ್ಮದ್ ಜುಬೇರ್ ಸೇರಿದಂತೆ ಹಲವಾರು ಮುಖಂಡರು ಆಗಮಿಸಿ ಸಿಹಿ ಹಂಚಿ ಯಾತ್ರೆಗೆ ಶುಭ ಕೋರಿದರು.

# ವೈರುಧ್ಯ ಮರೆತು ಒಲವು ಗುಣಿಸುವುದೇ ವಿಜಯದಶಮಿ

## ರಂಭಾಪುರಿ ಜಗದ್ಗುರುಗಳ ಶಾಂತಿ ಸಂದೇಶ

ಲಿಂಗಸುಗೂರು, ಅ. 24 - ಮನುಕುಲದ ಬದುಕಿನ ವಿದ್ಯಮಾನಗಳಲ್ಲಿ ಇರಬಹುದಾದ ಎಲ್ಲ ದ್ವಂದ್ವ ವೈರುಧ್ಯಗಳನ್ನು ಮರೆತು ಹದುಳ ಭಾವನೆಗಳ ಸಂಗಮದಲ್ಲಿ ಒಲವು ಗುಣಿಸುವುದೇ ವಿಜಯದಶಮಿ ಹಬ್ಬದ ಮೂಲ ಆಶಯವಾಗಿದೆ ಎಂದು ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.



ಇಲ್ಲಿನ ಮಾನವ ಧರ್ಮ ಮಂಟಪದಲ್ಲಿ ಹತ್ತು ದಿನಗಳ ಕಾಲ ಜರುಗಿದ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ವಿಜಯದಶಮಿಯ ಶಾಂತಿ ಸಂದೇಶ ಅನುಗ್ರಹಿಸಿ ಜಗದ್ಗುರುಗಳು ಮಾತನಾಡಿದರು.

ಜಾತಿ, ವರ್ಣ, ವರ್ಗ ಸಂಘರ್ಷಗಳನ್ನು ಬದಿಗೊತ್ತಿ ಸ್ನೇಹ ಸಿಂಚನದಲ್ಲಿ ಸಹೋದರ ಭಾವತನ್ಮಯತೆಯನ್ನು ಹೊಂದಲು ದಸರಾ ಹಬ್ಬ ಹಿರಿದಾದ ಅವಕಾಶಗಳನ್ನು ಒದಗಿಸುತ್ತದೆ. ಪೈಶಾಚಿಕ ಪ್ರವೃತ್ತಿಗಳಿಂದ ಹೊರಬಂದು ಸಾತ್ವಿಕ ಸತ್ಯ-ಶುದ್ಧತೆಯ ಜೀವನ ವಿಧಾನ ಹೊಂದಲು ಎಲ್ಲರೂ ಸಂಕಲ್ಪಿಸುವ ಅಗತ್ಯವಿದೆ ಎಂದರು.

ಆದಿ ಶಕ್ತಿ ಮಾತೆಯ ಅರ್ಚನೆ ಆರಾಧನೆಗೆ ಮೀಸಲಾದ ನವರಾತ್ರಿ ಹಬ್ಬವು ದುಷ್ಟರ ನಿಗ್ರಹ ಮತ್ತು ಶಿಷ್ಟರ ಪರಿಪಾಲನೆಗೆ ಬೆಳಕು ತುಂಬುತ್ತದೆ. ಅವರಿವರೆಂಬ ವಿಂಗಡಣೆಯನ್ನು ತೊರೆದು ಎಲ್ಲರೂ ನಮ್ಮವರೇ ಎಂದು ಒಂದಾಗಿಸುವ ಜೋಡಣೆಯನ್ನು ಹುಟ್ಟು ಹಾಕುವ ಹಬ್ಬವೇ ವಿಜಯದಶಮಿ. ಮನುಕುಲದ ವಿನಾಶಕ್ಕೆ ಕಾರಣವಾಗುವ ಎಲ್ಲ ಮಾರಕ ಕೃತ್ಯಗಳನ್ನು ಕೈ ಬಿಟ್ಟು ಬಾಳನ್ನು ಬಂಗಾರವಾಗಿಸುವ ಶಾಂತಿಪೂರ್ಣ ನಡೆ ನುಡಿಗಳನ್ನು ಸ್ವೀಕರಿಸಿ ಅನುಷ್ಠಾನಗೊಳಿಸುವ ಪರ್ವ ಕಾಲವೇ ವಿಜಯ ದಶಮಿ. ಕತ್ತರಿ ಗುಣವನ್ನೇ ಕೇಂದ್ರೀಕರಿಸಿರುವ ಜಾತೀಯತೆಯ ಕುಬ್ಜ ಮನಸ್ಥಿತಿಯ ಎಲ್ಲರ ಮನಗಳನ್ನು ಸೂಜಿಯಂತೆ ಕೂಡಿಸುವ ಧರ್ಮ ಪರಿಪಾಲನೆಗೆ ಸರ್ವರ ಭಾವನೆಗಳು ತೆರೆದುಕೊಳ್ಳಬೇಕೆಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಕರೆ ನೀಡಿದರು.

ದೇವರ ಭೂಪುರದ ಅಭಿನವ ಗಜದಂಡ ಶಿವಾಚಾರ್ಯ ಸ್ವಾಮಿಗಳು ಪ್ರಾಸ್ತಾವಿಕ ಮಾತನಾಡಿದರು.

ಎಡೆಯೂರು ರೇಣುಕ ಶಿವಾಚಾರ್ಯ ಸ್ವಾಮಿಗಳು ಸೇರಿದಂತೆ ಸಿದ್ಧರಬೆಟ್ಟ. ಮಳಲಿ, ಸಂಗೊಳ್ಳಿ, ಸಿಂಧನೂರು, ರೌಡಕುಂದ, ಸಿಂದಗಿ, ಉಕ್ಕಡಗಾತ್ರಿ, ಸಂತೆಕಲ್ಲೂರು ಶ್ರೀಗಳು ಅಂತಾಪುರ ತಾತಾ ಹಾಗೂ ಪ್ರಧಾನ ಕಾರ್ಯದರ್ಶಿ, ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪುರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸ್ವಾಗತ ಸಮಿತಿಯ ಅಧ್ಯಕ್ಷರೂ ಆಗಿರುವ ಶಾಸಕ ಮಾನಪ್ಪ ಡಿ. ವಜ್ಜಲ್ ಸ್ವಾಗತಿಸಿದರು. ಶ್ರೀ ಜಗದ್ಗುರು ರಂಭಾಪುರಿ ಪೀಠದ ಆಡಳಿತಾಧಿಕಾರಿ ಎಸ್.ಬಿ. ಹಿರೇಮಠ, ಶ್ರೀ ಪೀಠದ ವಾರ್ತಾ ಕಾರ್ಯದರ್ಶಿ ಡಾ. ಗುರುಮೂರ್ತಿ ಯರಗಂಬಳಿಮಠ, ವಾರ್ತಾ ಸಂಯೋಜನಾಧಿಕಾರಿ ಸಿ.ಎಚ್. ಬಾಳನಗೌಡ್ರ ಇದ್ದರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲದ ಸಾಧಕರಿಂದ ವೇದಘೋಷ, ವಿಶ್ವೇಶ್ವರಯ್ಯ ಹಿರೇಮಠ ಲಿಂಗಸುಗೂರು, ಮಲ್ಲಿಕಾರ್ಜುನ ಹೂಗಾರ ಗದಗ ಹಾಗೂ ಷಣ್ಮುಖಯ್ಯ ಹಿರೇಮಠ ಕಂಚಿನೆಗಳೂರು ಇವರಿಂದ ಭಕ್ತಿ ಗೀತೆ ಜರುಗಿತು. ಶಿವಮೊಗ್ಗದ ಶಾಂತಾ ಆನಂದ ನಿರೂಪಿಸಿದರು.

**ವೈಭವದ ಅಡ್ಡಪಲ್ಲಕ್ಕಿ:** ಸಂಜೆ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಲಿಂಗಸುಗೂರು ನಗರದ ಪ್ರಮುಖ ಬೀದಿಗಳಲ್ಲಿ ಜರುಗಿತು.

# ಶ್ರೀ ಶಾರದಾಂಬ ದೇವಿಯ ಪಲ್ಲಕ್ಕಿ ಉತ್ಸವ

ದಾವಣಗೆರೆ, ಅ. 23 - ವಿಜಯ ದಶಮಿಯ ಪ್ರಯುಕ್ತ ನಗರದ ಎಸ್. ನಿಜಲಿಂಗಪ್ಪ ಬಡಾವಣೆ ಯಲ್ಲಿರುವ ಶ್ರೀ ಶಾರದಾಂಬ ದೇವಸ್ಥಾನದಲ್ಲಿ ಶ್ರೀ ಶಾರದಾ ದೇವಿ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯ ಮೂಲಕ ನಗರದ ರಾಜ ಬೀದಿಗಳಲ್ಲಿ ಸಂಚರಿಸಿ ಪಲಕ್ಕಿ ಮೆರವಣಿಗೆ ಮಾಡಲಾಯಿತು.



ವೇದಬ್ರಹ್ಮಶ್ರೀ ಶಂಕರ ನಾರಾಯಣ ಶಾಸ್ತ್ರಿಗಳು ಮತ್ತು ಶ್ರೀ ಶಂಕರ ಸೇವಾ ಸಂಘದ ಅಧ್ಯಕ್ಷ ಡಾ. ಬಿ. ಟಿ.ಅಚ್ಯುತ್ ಅವರು ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಶ್ರೀನಿವಾಸ್ ಜೋಶಿ, ಉಪಾಧ್ಯಕ್ಷ ಮೋತಿ ಸುಬ್ರಹ್ಮಣ್ಯ, ವಿನಾಯಕ ಜೋಶಿ, ಅನಿಲ್ ಬಾರೆಂಗಳ್, ರಾಘವೇಂದ್ರ, ರಮೇಶ್, ದಿವಾಕರ್, ರಮೇಶ್ ಪಾಟೀಲ್, ಅನಿರುದ್ಧ, ಮಂಜುನಾಥ್, ಹಾಗು ಮಹಿಳಾ ಸಂಘದ ಶ್ರೀಮತಿ ನಳಿನಿ ಅಚ್ಯುತ್ ಮತ್ತು ಅವರ ಸಂಗಡಿಗರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

# ಕಾಗಿನೆಲೆ ಗುರುಪೀಠಕ್ಕೆ ಸಚಿವ ಎಸ್ಸೆಸ್ಸೆಂ ಭೇಟಿ



ದಾವಣಗೆರೆ, ಅ. 24 - ಹಾವೇರಿ ಜಿಲ್ಲೆ ಕಾಗಿನೆಲೆ ಕನಕ ಗುರುಪೀಠಕ್ಕೆ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ನಿನ್ನೆ ಸಂಜೆ ಭೇಟಿ ನೀಡಿದರು.

ಕನಕದಾಸರ ದರ್ಶನ ಪಡೆದ ಸಚಿವರು ನಂತರ ಕಾಗಿನೆಲೆ ಮಹಾಸಂಸ್ಥಾನದ ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣನವರ್, ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಕಾಂಗ್ರೆಸ್ ಮುಖಂಡರುಗಳಾದ ಬೇತೂರು ಕರಿಬಸಪ್ಪ, ಬಿ.ಕೆ. ಪರಶುರಾಮ್, ಕೆ.ಜಿ. ಶಿವಕುಮಾರ್, ಹರಿಹರದ ರೇವಣಸಿದ್ದಪ್ಪ, ಬೂದಾಳ್ ಬಾಬು, ಸುರಭಿ ವಿನಯ್, ಹಾಲೇಶ್ ಗೌಡ ಮತ್ತಿತರರಿದ್ದರು.

# ಅಂತರರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿ

## ಸಿದ್ದಾರ್ಥ್, ಕರಣ್ ಪ್ರೀ-ಕ್ವಾರ್ಟರ್‌ಗೆ ಪಾದಾರ್ಪಣೆ



ರಿಶಿ ರೆಡ್ಡಿ



ಸಿದ್ಧಾರ್ಥ ರಾವ್

ದಾವಣಗೆರೆ, ಅ. 24 – ನಗರದಲ್ಲಿ ನಡೆಯುತ್ತಿರುವ ಪುರುಷರ ಅಂತರರಾಷ್ಟ್ರೀಯ ಪಂದ್ಯಾವಳಿಯಲ್ಲಿ ಭಾರತದ ಭರವಸೆಯ ಆಟಗಾರ ಸಿದ್ದಾರ್ಥ್ ರಾವತ್ ಅವರು ಶುಭಾರಂಭ ಕಂಡಿದ್ದಾರೆ.

ಐದನೇ ಶ್ರೇಯಾಂಕಿತ ರಾವತ್ ಅವರು ಸೂರಜ್ ಪ್ರಬೋಧ್ ವಿರುದ್ಧ 6-1, 6-4 ಅಂತರದ ನೇರ ಸೆಟ್‌ಗಳ ಗೆಲುವು ಕಂಡಿದ್ದಾರೆ.

ಸೋಮವಾರ ನಡೆದ ಮತ್ತೊಂದು ಪಂದ್ಯದಲ್ಲಿ ಕರಣ್ ಸಿಂಗ್ ಅವರು ಇನ್ನೋರ್ವ ದೇಶೀಯ ಆಟಗಾರ ರಿಶಿ ರೆಡ್ಡಿ ವಿರುದ್ಧ 6-1, 6-4 ಅಂತರದ ಗೆಲುವು ಸಾಧಿಸಿ ಪ್ರಾಬಲ್ಯ ಮೆರೆದಿದ್ದಾರೆ. ಈ ಮೂಲಕ ರಾವತ್ ಹಾಗೂ ಸಿಂಗ್ ಅವರಿಬ್ಬರೂ ಸಿಂಗಲ್ಸ್ ವಿಭಾಗದಲ್ಲಿ ಪ್ರೀ - ಕ್ವಾರ್ಟರ್ ಹಂತಕ್ಕೆ ಪ್ರವೇಶ ಪಡೆದಿದ್ದಾರೆ.

ಡಬಲ್ಸ್ ವಿಭಾಗದಲ್ಲಿ ಅಮೆರಿಕದ ಬೋಗ್ದನ್ ಬೊಬ್ರೊವ್ ಹಾಗೂ ನಿಕ್ ಚಾಪೆಲ್ ಅವರು ಭಾರತದ ಜೋಡಿಯಾದ ರಿಶಬ್ ಅಗರ್‌ವಾಲ್ ಹಾಗೂ ನಿತಿನ್ ಕುಮಾರ್ ಸಿನ್ಹಾ ವಿರುದ್ಧ ಕಠಿಣ ಹೋರಾಟದ ನಂತರ ಗೆಲುವು ಸಾಧಿಸಿದರು. ಈ ಪಂದ್ಯ 6-7, 6-1, 11-9 ಸೆಟ್‌ಗಳ ಅಂತರದಿಂದ ನಿರ್ಧಾರವಾಯಿತು.

ಮತ್ತೊಂದು ಪಂದ್ಯದಲ್ಲಿ ಉನ್ನತ ಶ್ರೇಯಾಂಕಿತರಾದ ಪುರವ್ ರಾಜ ಹಾಗೂ ರಾಮಕುಮಾರ್ ರಾಮನಾಥನ್ ಅವರು ಭಾರತ – ಮಲೇಷಿಯ ಜೋಡಿಯಾದ ದೇವ್ ಜಾವಿಯ ಹಾಗೂ ಮಿತ್ಸುಕಿ ವೀ ಕಾಂಗ್ ಲಿಯಾಂಗ್ ವಿರುದ್ಧ ಗೆಲುವು ಸಾಧಿಸಿದರು. ಕೊನೆಯ ಹಂತದಲ್ಲಿ ಜಾವಿಯ ಹಾಗೂ ಲಿಯಾಂಗ್ ಜೋಡಿ ತೋರಿದ ಪ್ರತಿರೋಧವನ್ನು ಮೀರಿ ಭಾರತದ ಜೋಡಿ 6-3, 7-6 (4) ಅಂತರದ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್ ಹಂತ ಪ್ರವೇಶಿಸಿತು.

# ನಗರದಲ್ಲಿ ಇಂದು ಕಳಸದ ಪೂಜೆ

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ನವರಾತ್ರಿ ಮಹೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ ಕಳಸದ ಪೂಜೆ ನಂತರ 11.30 ಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಸಮ್ಮುಖ ಹಾಗೂ ಶ್ರೀ ಓಂಕಾರ ಶಿವಾ ಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಸಾಮೂಹಿಕ ವಿವಾಹ ಜರಗುವುದು. ದಿ. ಶ್ರೀಮತಿ ಪಾರ್ವತಮ್ಮ ಇವರ ಜ್ಞಾಪಕಾರ್ಥವಾಗಿ ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ಕುಟುಂಬ ವರ್ಗದವರ ಅನ್ನ ಸಂತರ್ಪಣೆ ಸೇವೆ ನಡೆಯುವುದು.

# ಸ್ಪಿನ್ ಮಾಂತ್ರಿಕ ಬಿಶನ್ ಸಿಂಗ್ ಬೇಡಿ ನಿಧನ

ನವದೆಹಲಿ, ಅ. 24 – ಭಾರತದ ಮಾಂತ್ರಿಕ ಸ್ಪಿನ್ನರ್ ಬಿಶನ್ ಸಿಂಗ್ ಬೇಡಿ ನಿಧನರಾಗಿದ್ದಾರೆ. ಅವರಿಗೆ 77 ವರ್ಷ ವಯಸ್ಸಾಗಿತ್ತು. ಅವರು ಸುದೀರ್ಘ ಕಾಲದಿಂದ ಅಸ್ವಸ್ಥರಾಗಿದ್ದರು. ಅವರ ಅಂತ್ಯಕ್ರಿಯೆಯಲ್ಲಿ ಕ್ರಿಕೆಟ್ ದಿಗ್ಗಜರಾದ ಕಪಿಲ್ ದೇವ್ ಹಾಗೂ ವಿರೇಂದ್ರ ಸೆಹ್ವಾಗ್ ಮತ್ತಿತರರು ಪಾಲ್ಗೊಂಡಿದ್ದರು. ವಿಶ್ವಕಪ್ ವಿಜೇತ ಕಪಿಲ್ ದೇವ್ ನೇತೃತ್ವದ ತಂಡದಲ್ಲಿ ಬಿಶನ್ ಸಿಂಗ್ ಸಹ ಇದ್ದರು.



1946ರಲ್ಲಿ ಅಮೃತ್‌ಸರದಲ್ಲಿ ಜನಿಸಿದ್ದ ಬೇಡಿ, ಭಾರತದ ಪರವಾಗಿ 67 ಪಂದ್ಯಗಳಲ್ಲಿ ಆಡಿ 266 ವಿಕೆಟ್ ಪಡೆದಿದ್ದರು. 14 ಬಾರಿ ಐದು ಹಾಗೂ ಒಂದು ಬಾರಿ 10 ವಿಕೆಟ್ ಪಡೆದಿದ್ದರು.

ಎರಪಲ್ಲಿ ಪ್ರಸನ್ನ, ಭಗವತ್ ಚಂದ್ರಶೇಖರ್, ಶ್ರೀನಿವಾಸ ವೆಂಕಟರಾಘವನ್ ಹಾಗೂ ಬೇಡಿ ಅವರನ್ನು ಭಾರತದ ನಾಲ್ಕು ಸ್ವರ್ಣ ಸ್ಪಿನ್ನರ್‌ಗಳು ಎಂದೇ ಪರಿಗಣಿಸಲಾಗಿತ್ತು. 1966ರಿಂದ 1978ರ ನಡುವೆ ಅವರು ಭಾರತದ ಬೌಲಿಂಗ್ ಘಟಕದ ಆಧಾರವಾಗಿದ್ದರು. 1975ರಿಂದ 1979ರ ನಡುವೆ ಬೇಡಿ ಭಾರತೀಯ ಕ್ರಿಕೆಟ್ ತಂಡದ ನಾಯಕರೂ ಆಗಿದ್ದರು. 1990ರಲ್ಲಿ ಅವರು ಅಲ್ಪ ಕಾಲ ಭಾರತೀಯ ತಂಡದ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿದ್ದರು. ರಾಷ್ಟ್ರೀಯ ತಂಡದ ಆಯ್ಕೆಗಾರರಾಗಿ ಹಾಗೂ ಯುವ ಕ್ರಿಕೆಟಿಗರ ಮಾರ್ಗದರ್ಶಕರಾಗಿಯೂ ಕಾರ್ಯನಿರ್ವಹಿಸಿದ್ದರು.

## ಕಿತ್ತೂರು ಜಯಣ್ಣ ಅವರಿಗೆ ಪುತ್ರ ವಿಯೋಗ



ಅಕ್ಕಿ ವರ್ತಕರಾದ ಕಿತ್ತೂರು ಜಯಣ್ಣ ಅವರ ಪುತ್ರ **ಚಿ|| ಕೆ.ಜೆ. ಬಸವಂತ ಕುಮಾರ್** ಅವರು ದಿನಾಂಕ 23.10.2023ರ ಸೋಮವಾರ ಸಂಜೆ 6 ಗಂಟೆಗೆ ನಿಧನರಾದರು. ಮೃತರಿಗೆ ಸುಮಾರು 30 ವರ್ಷ ವಯಸ್ಸಾಗಿತ್ತು. ತಂದೆ, ಇಬ್ಬರು ಸಹೋದರಿಯರು, ಮಾವಂದಿರು ಸೇರಿದಂತೆ, ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24.10.2023ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮ ಜಗಳೂರು ತಾಲ್ಲೂಕಿನ ಉದ್ದಗಟ್ಟ ಗ್ರಾಮದಲ್ಲಿರುವ ಅವರ ಸ್ವಂತ ತೋಟದಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ

Gurudatt Academy
Integrated Coaching for
NEET-IITJEE-CET-2024
Tuitions for Class 8th, 9th, 10th, 1st PUC, 2nd PUC, CBSE, ICSE, CET, NEET, IIT-JEE, NDA.
Physics, Chemistry, Maths, Biology
Rangmahal, AVK College Road, Davangere.
Call : 97398 65711

ಸರ್ವರಿಗೂ ದಸರಾ ಮತ್ತು ದೀಪಾವಳಿ ಹಬ್ಬದ ಶುಭಾಶಯಗಳು
ಅನೂಪ ಹಾಸ್ಪಿಟಲ್
ಪಿ.ಜೆ.ಬಡಾವಣೆ, ರಾಂ & ಕೋ ಸರ್ಕಲ್ ಹತ್ತಿರ, ದಾವಣಗೆರೆ




ಡಾ|| ವೀರೇಂದ್ರ ಸ್ವಾಮಿ ಎಸ್.ಎಂ.
M.S. (Gen. Surgery), DIP, LAP, FAIS.
✦ ಸೀನಿಯರ್ ಕನ್ಸಲ್ಟೆಂಟ್ ಜನರಲ್, ಗ್ಯಾಸ್ಟ್ರೋ ಅಂಡ್ ಎಂಡೋಸ್ಕೋಪಿಕ್
✦ ಸರ್ಜನ್ ಅಂಡ್ ಎಂಡೋಸ್ಕೋಪಿಸ್ಟ್
✦ ಪ್ರೊಫೆಸರ್ ಆಫ್ ಸರ್ಜರಿ, ಬಿಎಂಸಿಹೆಚ್
✦ ಮಾಜಿ ಪ್ರೊಫೆಸರ್ ಮತ್ತು ಸರ್ಜರಿ ಮುಖ್ಯಸ್ಥರು, ಎಸ್‌ಎಸ್‌ಐಎಂಹೆಚ್ & ಆರ್‌ಸಿ



ಮೊ. : 98452 36274, ಕ್ಲಿನಿಕ್ : 94497 93689

ಮಲ್ಟಿ ಸ್ಪೆಷಾಲಿಟಿ ಮತ್ತು ಕನ್ಸಲ್ಟೆಂಟ್ ವೈದ್ಯರುಗಳಿಂದ
ಲಭ್ಯವಿರುವ ವಿಶೇಷ ಸೇವೆಗಳು :

→ ಜನರಲ್ ಸರ್ಜರಿ
→ ಜನರಲ್ ಮೆಡಿಸಿನ್
→ ರೆಸ್ಪಿರೇಟರಿ ಮೆಡಿಸಿನ್
→ ಅಬ್ಸ್ಟೆಟ್ರಿಕ್ಸ್ ಅಂಡ್ ಗೈನಕಾಲಜಿ ಗ್ಯಾಸ್ಟ್ರೋ ಎಂಟೆರಾಲಜಿ
→ ಸರ್ಜಿಕಲ್ ಗ್ಯಾಸ್ಟ್ರೋ ಎಂಟೆರಾಲಜಿ
→ ಲ್ಯಾಪರೋಸ್ಕೋಪಿಕ್ ಆಪರೇಷನ್ಸ್
→ ಗಾಲ್ ಸ್ಟೋನ್ ಆಪರೇಷನ್ಸ್
→ ಗ್ಯಾಸ್ಟ್ರೋ ಆಪರೇಷನ್ಸ್
→ ಕಾಲೋನಿಕ್ ಆಪರೇಷನ್ಸ್
→ ಹರ್ನಿಯಾ ಆಪರೇಷನ್ಸ್
→ ಯುಟೆರಸ್ ಆಪರೇಷನ್ಸ್
→ ಕೊಲೊನೋಸ್ಕೋಪಿ
→ ಎಂಡೋಸ್ಕೋಪಿ/ಅಪೆಂಡಿಕ್ಸ್ ಆಪರೇಷನ್ಸ್
→ ಓವರಿಯನ್ ಸಿಸ್ಟ್ ಆಪರೇಷನ್ಸ್
→ ಆರ್ಥೋಪೆಡಿಕ್ ಆಪರೇಷನ್ಸ್
→ ಫ್ರಾಕ್ಚರ್ ಆಫ್ ಬೋನ್ ಆಪರೇಷನ್ಸ್
→ ಜಾಯಿಂಟ್ ರಿಪ್ಲೇಸ್ ಮೆಂಟ್
→ ಐಸಿಯು ( ಸಿಂಗಲ್ ಬೆಡ್)
→ ಬೇಸಿಕ್ ಕ್ಯಾನ್ಸರ್ ಆಪರೇಷನ್
→ ಬ್ರೆಸ್ಟ್ ಆಪರೇಷನ್ಸ್
→ ವೆರಿಕೋಸ್ ವೇನ್ಸ್ ಆಪರೇಷನ್ಸ್
→ ಟಾನ್ಸಿಲ್ ಆಪರೇಷನ್ಸ್
→ ಫೈಲ್ಸ್ ಆಪರೇಷನ್ಸ್
....... ಇನ್ನೂ ಅನೇಕ